ಸಂಪುಟ: 05 ಸಂಚಿಕೆ: 225 ಪುಟಗಳು: 08 ಗುರುವಾರ 30 ಅಕ್ಟೋಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

**ಮುಂಜಾನೆ ಮಾತು**

ಕಲ್ಲಿಗೆ ಸುಂದರ ಆಕಾರ ಬರಬೇಕಾದರೆ ಉಳಿಯ ಪೆಟ್ಟು ಬೀಳಲೇಬೇಕು, ಬದುಕು ಸುಂದರ ಆಗಲು ಕಷ್ಟ ಸುಖಗಳನ್ನು ಅನುಭವಿಸಲೇ ಬೇಕು..

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ಬಿಹಾರ ಚುನಾವಣೆಗೆ ಸಿದ್ದರಾಮಯ್ಯ 300 ಕೋಟಿ ಸಂಗ್ರಹ ಮಾಡಿದ್ದಾರೆ!

• ಉದಯವಾಹಿನಿ, ಬೆಂಗಳೂರು

ಬಿಹಾರ ಚುನಾವಣೆಗೆ ಸಿಎಂ ಸಿದ್ದರಾಮಯ್ಯ ಅವರು 300 ಕೋಟಿ ಸಂಗ್ರಹ ಮಾಡಿದ್ದಾರೆ ಎಂದು ಮಾಜಿ ಸಚಿವ ಶ್ರೀರಾಮುಲು ಗಂಭೀರ ಆರೋಪ ಮಾಡಿದ್ದಾರೆ. ಚಿತ್ರದುರ್ಗದಲ್ಲಿ ಬುಧವಾರ ಮಾತನಾಡಿ, ಸಚಿವರನ್ನು ಔತಣಕೂಟಕ್ಕೆ ಆಹ್ವಾನಿಸುವ ಮೂಲಕ ಸಿದ್ದರಾಮಯ್ಯ ಅವರು ಕೋಟಿ ಕೋಟಿ ಸಂಗ್ರಹ ಮಾಡಿದ್ದಾರೆ ಎಂದು ಆರೋಪ ಮಾಡಿದರು.

ಸಿಎಂ ಸಿದ್ದರಾಮಯ್ಯ ಅವರ ಕುರ್ಚಿ ಅಲ್ಲಾಡುತ್ತಿದೆ. ಈ ಹಿನ್ನೆಲೆಯಲ್ಲಿ ಅವರು ನವೆಂಬರ್ 15 ರಂದು ದೆಹಲಿಗೆ ತೆರಳುತ್ತಿದ್ದಾರೆ. ಕುರ್ಚಿ ಉಳಿಸಿಕೊಳ್ಳಲು ದೆಹಲಿಗೆ ಹೋಗುತ್ತಿದ್ದಾರೆ ಎಂದು ಅವರು ವ್ಯಾಖ್ಯಾನಿಸಿದರು. ಬಿಹಾರ ಚುನಾವಣೆ ಘೋಷಣೆ ಆಗಿದೆ. ಬಿಹಾರ ಚುನಾವಣೆಗೆ ಖರ್ಚಿಗಾಗಿ ಸಚಿವರು ಕಲೆಕ್ಷನ್ ಆರಂಭಿಸಿದ್ದಾರೆ. ದೊಡ್ಡ ಮಟ್ಟದಲ್ಲಿ ಹಣ ಬೇಕು ಎಂಬ ನಿಟ್ಟಿನಲ್ಲಿ ಪ್ರಯತ್ನ ನಡೆಯುತ್ತಿದೆ ಎಂದು ಆರೋಪ ಮಾಡಿದರು. ಹೈಕಮಾಂಡ್ ಸೂಚನೆಯಂತೆ ಸಿಎಂ ಸಿದ್ದರಾಮಯ್ಯ ಅವರು, ಬಿಹಾರ ಚುನಾವಣೆಗೆ 300 ಕೋಟಿ ಸಂಗ್ರಹ ಮಾಡಿದ್ದಾರೆ. ಸದ್ಯ ಹೈಕಮಾಂಡ್ ನಾಯಕರಿಗೆ ಸಿದ್ದರಾಮಯ್ಯ ಅವರು ಕಾಮದೇನು, ಕಲ್ಪವೃಕ್ಷ ತರ ಆಗಿದ್ದಾರೆ ಎಂದು ವಾಗ್ದಾಳಿ



ನಡೆಸಿದರು.

ಶ್ರೀರಾಮುಲು ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಡಿಸಿಎಂ ಡಿಕೆ ಶಿವಕುಮಾರ್ ಅವರು, ಶ್ರೀರಾಮುಲು ಕೂಡಾ ಹಣ ಕೊಟ್ಟಿದ್ದಾರೆ ಕಾಂಗ್ರೆಸ್ ಪಕ್ಷಕ್ಕೆ.

ಆ ಹಣವನ್ನು ನಾವು ಬಿಹಾರಕ್ಕೆ ಕಳಿಸಿಕಕೊಟ್ಟಿದ್ದೇವೆ ಎಂದು ವ್ಯಂಗ್ಯವಾಗಿ ತಿರುಗೇಟು ನೀಡಿದರು.

**ಆರ್‌ಎಸ್‌ಎಸ್ ಬೆಂಬಲಿಗರಿಗೆ ಸಂತಸ**

ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಅವರು ಸಚಿವರಿಗೆ ಔತಣಕೂಟವನ್ನು ಆಯೋಜಿಸಿದ್ದರು. ಈ ಔತಣಕೂಟದಲ್ಲಿ ಬಹುತೇಕ ಸಚಿವರು ಭಾಗಿಯಾಗಿದ್ದರು. ಔತಣಕೂಟದಲ್ಲಿ ರಾಜ್ಯದ ಅಭಿವೃದ್ಧಿ ಹಾಗೂ ಇನ್ನಿತರ ವಿಚಾರಗಳ ಬಗ್ಗೆ ಚರ್ಚೆ ನಡೆದಿತ್ತು. ಆದರೆ ಬಿಜೆಪಿ ಔತಣಕೂಟಕ್ಕೆ ವಿಭಿನ್ನ ವ್ಯಾಖ್ಯಾನ ನೀಡಿತ್ತು. ಇದೀಗ ಮಾಜಿ ಸಚಿವ ಶ್ರೀರಾಮುಲು ಗಂಭೀರ ಆರೋಪ ಮಾಡಿದ್ದಾರೆ. ಬಿಹಾರ ಚುನಾವಣೆಗೆ ಹಣ ಸಂಗ್ರಹ ಮಾಡುವ ಉದ್ದೇಶದಿಂದಲೇ ಔತಣಕೂಟ ಏರ್ಪಡಿಸಲಾಗಿದೆ ಎಂದು ಆರೋಪಿಸಿದ್ದಾರೆ. ಇದು ಇದೀಗ ಚರ್ಚೆಗೆ ಗ್ರಾಸವಾಗಿದೆ. ಆದರೆ ಕಾಂಗ್ರೆಸ್ ನಾಯಕರು ಇದಕ್ಕೆ ತೀವ್ರ ರೀತಿಯಲ್ಲಿ ತಿರುಗೇಟು ನೀಡಿದ್ದಾರೆ.

**ಸಕ್ರಿಯವಾದ ರಾಮುಲು!:** ಮಾಜಿ ಸಚಿವ ಶ್ರೀರಾಮುಲು ಇದೀಗ ಸಕ್ರಿಯವಾಗಿದ್ದಾರೆ. ಆಂತರಿಕ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅವರು ರಾಜಕಾರಣದಲ್ಲಿ ಅಷ್ಟೊಂದು ಕಾಣಿಸಿಕೊಳ್ಳುತ್ತಿರಲಿಲ್ಲ. ಆದರೆ ಇದೀಗ ರಾಜ್ಯ ಸರ್ಕಾರದ ವಿರುದ್ಧ ಹೇಳಿಕೆ ನೀಡುವ ಮೂಲಕ ಮತ್ತೆ ಕಾಣಿಸಿಕೊಂಡಿದ್ದಾರೆ.

ಉದಯ ವಾಹಿನಿ
ವರದಿಗಾರರು ಬೇಕಾಗಿದ್ದಾರೆ
ಎಂ.ಎ., ಜರ್ನಲಿಸಂ ಮಾಡಿರುವಂತಹ ಉತ್ಸಾಹಿ ಯುವಕ ಯುವತಿಯರು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕೆಲಸ ಮಾಡುವಂತಹ
ರಾಜ್ಯದಾದ್ಯಂತ ವರದಿಗಾರರು ಬೇಕಾಗಿದ್ದಾರೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9448225696
+91 8035841833
#: 1230 'JAYAMAHAL 13th cross, 2nd phase, Girinagar, Bangalore-560085. (Near to Bangalore one park, opposite mandya medical)
udayavahininews@gmail.com

## ಕನೇರಿ ಸ್ವಾಮೀಜಿಗೆ ಸುಪ್ರೀಂ ಕೋರ್ಟ್ ತರಾಟೆ: ಅರ್ಜಿ ವಜಾ

• ಉದಯವಾಹಿನಿ, ಬೆಂಗಳೂರು



ವಿಜಯಪುರ ಜಿಲ್ಲೆಗೆ ಪ್ರವೇಶ ನಿರ್ಬಂಧಿಸಿ ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಕನೇರಿ ಮಠದ ಕಾಡಸಿದ್ದೇಶ್ವರ ಸ್ವಾಮೀಜಿ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

'ಲಿಂಗಾಯತ ಮಠಾಧಿಪತಿಗಳ ವಿರುದ್ಧ ಆಕ್ಷೇಪಾರ್ಹ ನುಡಿಗಳನ್ನು ಆಡಿದ್ದಾರೆ' ಎಂಬ ಆರೋಪದ ಹಿನ್ನೆಲೆಯಲ್ಲಿ ಸ್ವಾಮೀಜಿಯವರು ಡಿಸೆಂಬರ್ 14ರವರೆಗೆ ವಿಜಯಪುರ ಜಿಲ್ಲೆ ಪ್ರವೇಶಿಸಬಾರದು ಎಂದು ವಿಜಯಪುರ ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಇತ್ತೀಚೆಗೆ ಎತ್ತಿ ಹಿಡಿದಿತ್ತು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್ ಹಾಗೂ ಪ್ರಸನ್ನ ಬಿ.ವರಾಲೆ ಪೀಠವು ಸ್ವಾಮೀಜಿ ಅವರನ್ನು ತರಾಟೆಗೆ ತೆಗೆದುಕೊಂಡಿತು. 'ಕೀಳು ಮಟ್ಟದ ಹೇಳಿಕೆ ನೀಡಿರುವ ನೀವು ಉತ್ತಮ ನಾಗರಿಕರಲ್ಲ' ಎಂದು ಕಟುವಾಗಿ ಹೇಳಿತು. ಹೇಳಿಕೆ ನೀಡುವಾಗ ಸ್ವಾಮೀಜಿ ಜಾಗರೂಕರಾಗಿರಬೇಕು.

ನಿಮ್ಮ ಇಂತಹ ಹೇಳಿಕೆಗಳನ್ನು ಒಪ್ಪಲು ಸಾಧ್ಯವಿಲ್ಲ. ಹೈಕೋರ್ಟ್ ಆದೇಶದಲ್ಲಿ ತಪ್ಪೇನಿದೆ' ಎಂದು ಪೀಠ ಪ್ರಶ್ನಿಸಿತು. 'ನೀವು ಹೀಗೆಯೇ ವರ್ತಿಸುತ್ತಿದ್ದರೆ ಎಲ್ಲಾ ಜಿಲ್ಲಾಧಿಕಾರಿಗಳು ಇಂತಹ ಆದೇಶಗಳನ್ನು ಹೊರಡಿಸುತ್ತಾರೆ' ಎಂದು ಕೂಡ ಪೀಠ ಸೂಚ್ಯವಾಗಿ ಹೇಳಿತು. 'ಪ್ರಕರಣದ ವಾಸ್ತವಾಂಶ ಹಾಗೂ ಸನ್ನಿವೇಶಗಳನ್ನು ಗಮನಿಸಿದರೆ, ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸಲು ನಾವು ಒಲವು ತೋರುವುದಿಲ್ಲ. ಡಿಸೆಂಬರ್ 14ರ ನಂತರ ಸ್ವಾಮೀಜಿ ಅವರು ಜಿಲ್ಲೆ ಪ್ರವೇಶಿಸಬಹುದು' ಎಂದು ಪೀಠ ಸ್ಪಷ್ಟಪಡಿಸಿತು.

## ಶಬರಿಮಲೆ ಯಾತ್ರೆಗೆ ದಿನಗಣನೆ ದೇವಸ್ಥಾನ ತೆರೆಯುವ ದಿನ ನಿಗದಿ

• ಉದಯವಾಹಿನಿ, ಬೆಂಗಳೂರು

ಶಬರಿಮಲೆ ದೇಗುಲ ನವೆಂಬರ್ 16 ರಂದು ಸಂಜೆ 5 ಕ್ಕೆ ಮಂಡಲ – ಮಕರ ಜ್ಯೋತಿ ಯಾತ್ರೆಗೆ ತೆರೆಯಲಿದೆ. ಆದರೆ, ಆನ್‌ಲೈನ್ ಕ್ಯೂ ಬುಕ್ಕಿಂಗ್ ಇನ್ನೂ ಆರಂಭಿಸದ ಕಾರಣ ಹೊರ ರಾಜ್ಯಗಳ ಅಯ್ಯಪ್ಪ ಭಕ್ತರು ಆತಂಕದಲ್ಲಿದ್ದಾರೆ. ಅಯ್ಯಪ್ಪ ದರ್ಶನಕ್ಕೆ ಆನ್‌ಲೈನ್ ಬುಕ್ಕಿಂಗ್ ಕಡ್ಡಾಯವಾಗಿದ್ದು, ಭಕ್ತರು ಪ್ರತಿದಿನ ವೆಬ್‌ಸೈಟ್‌ನಲ್ಲಿ ಬುಕ್ಕಿಂಗ್‌ಗಾಗಿ ಕಾಯುತ್ತಿದ್ದಾರೆ.

ಅಕ್ಟೋಬರ್ 27 ರಿಂದ ಬುಕ್ಕಿಂಗ್ ಆರಂಭವಾಗಲಿದೆ ಎಂದು ದೇವಸ್ವಂ ಅಧಿಕಾರಿಗಳು ಹೇಳಿದ್ದರು. ಆದರೆ, ಶನಿವಾರ ನಡೆದ ದೇವಸ್ವಂ ಮಂಡಳಿ ಸಭೆಯಲ್ಲೂ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ನಿರೀಕ್ಷೆ ಹುಸಿಯಾಗಿದೆ.

**ಪ್ರತಿದಿನ 70 ಸಾವಿರ ಭಕ್ತರಿಗೆ ದರ್ಶನಕ್ಕೆ ಅವಕಾಶ**

ಈ ವರ್ಷವೂ ಪ್ರತಿದಿನ 70 ಸಾವಿರ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲು ದೇವಸ್ವಂ ಮಂಡಳಿ ಯೋಜನೆ ರೂಪಿಸಿದೆ. ಆದರೆ, ಭಕ್ತರ ಸಂಖ್ಯೆಯನ್ನು ಕಡಿಮೆ ಮಾಡಲು ಪೊಲೀಸರು ಸೂಚಿಸಿದ್ದಾರೆ.

# ಭಾರತದೊಂದಿಗೆ ಗೌರವಯುತ ಸಂಬಂಧ
# ಭಾರತ–ಅಮೆರಿಕ ವ್ಯಾಪಾರ ಒಪ್ಪಂದ

• ಉದಯವಾಹಿನಿ, ಬೆಂಗಳೂರು

ದೀರ್ಘ ಸಮಯದಿಂದ ವಿಳಂಬವಾಗಿರುವ ಭಾರತದೊಂದಿಗೆ ಬಹು ನಿರೀಕ್ಷಿತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಿದ್ದೇವೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಸುಳಿವು ನೀಡಿದ್ದಾರೆ. ಏಷ್ಯಾ–ಪೆಸಿಫಿಕ್ ಆರ್ಥಿಕ ಸಹಕಾರ ಶೃಂಗದಲ್ಲಿ ಭಾಗವಹಿಸಲು ದಕ್ಷಿಣ ಕೊರಿಯಾಕ್ಕೆ ತೆರಳಿರುವ ಟ್ರಂಪ್ ಈ ಕುರಿತು ಪ್ರತಿಕ್ರಿಯಿಸಿದ್ದಾರೆ.'ಭಾರತ ಹಾಗೂ ಅಮೆರಿಕ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಿವೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. 'ನೀವು ಭಾರತ ಮತ್ತು ಪಾಕಿಸ್ತಾನವನ್ನು ಗಮನಿಸಿದರೆ ನಾವು ಭಾರತದೊಂದಿಗೆ

1. **ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ದಕ್ಷಿಣ ಕೊರಿಯಾ ಪ್ರವಾಸ.**
2. **ಭಾರತ-ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಶೀಘ್ರ ಜಾರಿ ಎಂದ ಟ್ರಂಪ್.**
3. **ಭಾರತದ ಪ್ರಧಾನಿ ಮೋದಿ ಅವರನ್ನು ಹಾಡಿ ಹೊಗಳಿದ ಅಮೆರಿಕ ಅಧ್ಯಕ್ಷ.**

ವ್ಯಾಪಾರ ಒಪ್ಪಂದ ಮಾಡಿಕೊಳ್ಳುತ್ತಿದ್ದೇವೆ. ಭಾರತ ಪ್ರಧಾನಿ ಮೋದಿ ಬಗ್ಗೆ ನನಗೆ ಅಪಾರ ಗೌರವ ಮತ್ತು ಪ್ರೀತಿ ಇದೆ. ನಾವು ಉತ್ತಮ ಬಾಂಧವ್ಯವನ್ನು ಹೊಂದಿದ್ದೇವೆ' ಎಂದು ಟ್ರಂಪ್ ಉಲ್ಲೇಖಿಸಿದ್ದಾರೆ. ಇದೇ ಸಂದರ್ಭದಲ್ಲಿ ವ್ಯಾಪಾರ ವಿಷಯವನ್ನು ಮುಂದಿಟ್ಟುಕೊಂಡು ಭಾರತ ಮತ್ತು ಪಾಕಿಸ್ತಾನ ನಡುವಣ ಯುದ್ಧವನ್ನು ನಿಲ್ಲಿಸಿರುವುದಾಗಿ ಟ್ರಂಪ್ ಮಗದೊಮ್ಮೆ ಹೇಳಿಕೆ ನೀಡಿದ್ದಾರೆ.

'ಪ್ರಧಾನಿ ಮೋದಿ ಒಳ್ಳೆಯ ವ್ಯಕ್ತಿ. ಕಿಲ್ಲರ್, ಅತ್ಯಂತ ಕಠಿಣ ವ್ಯಕ್ತಿ. ನಾವು ಹೋರಾಡುತ್ತೇವೆ ಎಂದು ಅವರು ಹೇಳಿದರು. ವಾವ್, ನನಗೆ ಗೊತ್ತಿರುವ ಅದೇ ವ್ಯಕ್ತಿ. ಎರಡು ದಿನಗಳ ಬಳಿಕ ಕರೆ ಮಾಡಿ, ನಮಗೆ ಅರ್ಥವಾಯಿತು ಎಂದು ಹೇಳಿದರು. ಯುದ್ಧವನ್ನು ನಿಲ್ಲಿಸಲಾಯಿತು. ಇದು ನಿಜಕ್ಕೂ ಅದ್ಭುತವಲ್ಲವೇ..? ಜೋ ಬೈಡನ್ ಇದ್ದಿದ್ದರೆ ಇದು ಸಾಧ್ಯವೇ ಎಂದು ನೀವು ಭಾವಿಸುತ್ತೀರಾ?' ಎಂದು ಟ್ರಂಪ್ ಹೇಳಿದ್ದಾರೆ.

**ಎರಡು ದೇಶಗಳ ಉದ್ಯೋಗ, ಉತ್ಪಾದನೆ ಮತ್ತು ವ್ಯಾಪಾರಕ್ಕೆ ಉತ್ತೇಜನ:** ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಬಗ್ಗೆ ದೀರ್ಘಕಾಲದಿಂದ ಚರ್ಚೆಗಳು ನಡೆಯುತ್ತಿವೆ. ಟ್ರಂಪ್ ಆಡಳಿತದಲ್ಲಿ ಭಾರತಕ್ಕೆ ವಿಶೇಷ ವ್ಯಾಪಾರ ಸ್ಥಾನಮಾನ ರದ್ದಾಗಿತ್ತು. ಆದರೆ ಈಗ ಶೀಘ್ರ ಒಪ್ಪಂದದ ಮಾತುಗಳು ಆರ್ಥಿಕ ಸಂಬಂಧಗಳನ್ನು ಸುಧಾರಿಸುವ ಸಂಕೇತವಾಗಿದೆ. ಭಾರತದ ಉತ್ಪನ್ನಗಳಿಗೆ ಅಮೆರಿಕ ಮಾರುಕಟ್ಟೆಯಲ್ಲಿ ಸುಲಭ ಪ್ರವೇಶ, ಅಮೆರಿಕದ ತಂತ್ರಜ್ಞಾನ ಮತ್ತು ಹೂಡಿಕೆಗಳು ಭಾರತಕ್ಕೆ ಬರಬಹುದು. ಇದು ಎರಡು ದೇಶಗಳ ಉದ್ಯೋಗ, ಉತ್ಪಾದನೆ ಮತ್ತು ವ್ಯಾಪಾರಕ್ಕೆ ಒಳ್ಳೆಯದು.

**ಭಾರತ–ಪಾಕ್ ಯುದ್ಧ ನಿಲ್ಲಿಸಿರುವುದಾಗಿ ಮತ್ತೆ ಹೇಳಿದ ಟ್ರಂಪ್:** ಭಾರತ ಮತ್ತು ಪಾಕಿಸ್ತಾನ ನಡುವಣ ಯುದ್ಧವನ್ನು ನಿಲ್ಲಿಸಿರುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ಪುನರುಚ್ಚರಿಸಿದ್ದಾರೆ. ಜಪಾನ್ ಪ್ರವಾಸದ ವೇಳೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಂಪ್, ಈ ಕುರಿತು ಪ್ರಸ್ತಾಪಿಸಿದ್ದಾರೆ.

'ಸುಂಕದ ವಿಷಯ ಮುಂದಿಟ್ಟುಕೊಂಡು ನಾನು ಹಲವು ಯುದ್ಧಗಳನ್ನು ನಿಲ್ಲಿಸಿದ್ದೇನೆ. ಭಾರತ ಮತ್ತು ಪಾಕಿಸ್ತಾನ ಪರಮಾಣು ಸಾಮರ್ಥ್ಯದ ಮಹಾನ್ ಶಕ್ತಿಯಾಗಿವೆ. ಏಳು ಸುಂದರ ಹಾಗೂ ಅತಿ ನೂತನ ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿತ್ತು' ಎಂದು ಟ್ರಂಪ್ ಹೇಳಿದ್ದಾರೆ.



## ಮೋದಿ ಬಹಳ ಸುಂದರ ವ್ಯಕ್ತಿ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ಅತ್ಯಾಪ್ತ ಗೆಳೆಯರಾಗಿದ್ದರು. ಆದರೆ, ಭಾರತ ರಷ್ಯಾದಿಂದ ಇಂಧನ ಖರೀದಿ ಮಾಡುತ್ತಿದೆ ಎಂಬ ಕಾರಣಕ್ಕೆ ಭಾರತದ ಮೇಲೆ ಅಮೆರಿಕ ಹೆಚ್ಚುವರಿಯಾಗಿ ಶೇ. 25ರಷ್ಟು ತೆರಿಗೆ ವಿಧಿಸಿದ ನಂತರ ಎರಡೂ ದೇಶಗಳ ನಡುವೆ ಅಂತರ ಸೃಷ್ಟಿಯಾಯಿತು. ಇದಷ್ಟೇ ಅಲ್ಲದೆ ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ನಡೆಯುವುದನ್ನು ತಪ್ಪಿಸಿ ಕದನವಿರಾಮಕ್ಕೆ ಒಪ್ಪಿಸಿದ್ದು ನಾನೇ ಎಂದು ಟ್ರಂಪ್ ಪದೇಪದೆ ಹೇಳುವ ಮೂಲಕ ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ಮುಜುಗರ ಉಂಟುಮಾಡಿದ್ದರು. ಇದೀಗ ಪ್ರಧಾನಿ ಮೋದಿಯನ್ನು ಹೊಗಳಿರುವ ಟ್ರಂಪ್ ಮೋದಿ ಅತ್ಯಂತ ಸುಂದರವಾದ ವ್ಯಕ್ತಿ ಎಂದು ಹೇಳಿದ್ದಾರೆ. ಆದರೆ, ಮೋದಿಯನ್ನು ಹೊಗಳಿ ಅಟ್ಟಕ್ಕೇರಿಸಿ ಮತ್ತೆ ತಮ್ಮ ಹಳೇ ರಾಗ ತೆಗೆದಿದ್ದಾರೆ.

**ಟ್ರಂಪ್ ಮತ್ತೆ ಅದೇರಾಗ**

**ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಶೀಘ್ರ ಜಾರಿ**

**ದ.ಕೊರಿಯಾದಲ್ಲಿ ಟ್ರಂಪ್ ಸುಳಿವು**

### ರಷ್ಯಾ ಸಂಬಂಧ ಮುನಿಸು ದೂರ..?

ಕಳೆದ ವಾರ ಭಾರತವು ರಷ್ಯಾದ ತೈಲ ಖರೀದಿ ಹಂತ ಹಂತವಾಗಿ ಕಡಿಮೆ ಮಾಡಲು ಒಪ್ಪಿಕೊಂಡ ನಂತರ, ಅಮೆರಿಕವು ಭಾರತದ ಸರಕುಗಳ ಮೇಲೆ ವಿಧಿಸಿರುವ ಸುಂಕವನ್ನು ಶೇ. 16ಕ್ಕೆ ಇಳಿಸಲು ಒಪ್ಪಿಕೊಂಡಿದೆ ಎಂದು ವರದಿಗಳು ತಿಳಿಸಿವೆ. ಆದರೆ ಭಾರತ-ರಷ್ಯಾ ತೈಲ ಸಂಬಂಧದ ಕುರಿತು ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ಮೋದಿ ನಡುವೆ ಚರ್ಚೆ ನಡೆದಿಲ್ಲ ಎಂದು ಭಾರತ ಎರಡು ಬಾರಿ ಸ್ಪಷ್ಟನೆ ನೀಡಿದೆ.

### ತುದಿಗಾಲ ಮೇಲೆ ನಿಂತಿದ್ದಾರೆ

ಡೊನಾಲ್ಡ್ ಟ್ರಂಪ್ ಮಾತ್ರ ಭಾರತವು ರಷ್ಯಾದಿಂದ ತೈಲ ಖರೀದಿಯನ್ನು ಕಡಿಮೆ ಮಾಡಲಿದೆ ಎಂದು ಭರವಸೆ ಹೊಂದಿದ್ದಾರೆ. ಅಲ್ಲದೇ ಭಾರತದೊಂದಿಗೆ ಉತ್ತಮ ಸಂಬಂಧ ಹೊಂದುವುದು ಅನಿವಾರ್ಯ ಎಂದು ಅರಿತಿರುವ ಅಮೆರಿಕ ಅಧ್ಯಕ್ಷರು, ಭಾರತದೊಂದಿಗೆ ಉತ್ತಮವಾದ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ತುದಿಗಾಲ ಮೇಲೆ ನಿಂತಿದ್ದಾರೆ. ಇದೇ ಕಾರಣಕ್ಕೆ ತಮ್ಮ ಏಷ್ಯಾ ಪ್ರವಾಸದ ಸಂದರ್ಭದಲ್ಲಿ ಒಂದಿಲ್ಲೊಂದು ಕಾರಣಕ್ಕೆ ಭಾರತವನ್ನ ನೆನಪು ಮಾಡಿಕೊಂಡಿರುವ ಡೊನಾಲ್ಡ್ ಟ್ರಂಪ್, ಇದೀಗ ಭಾರತದೊಂದಿಗೆ ಶೀಘ್ರದಲ್ಲೇ ದ್ವಿಪಕ್ಷೀತಯ ವ್ಯಾಪಾರ ಒಪ್ಪಂದವನ್ನು ಘೋಷಿಸುವುದಾಗಿ ಹೇಳಿದ್ದಾರೆ. ಅಮೆರಿಕ ಅಧ್ಯಕ್ಷರ ಈ ಹೇಳಿಕೆ ಇದೀಗ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ.






### 24 ತಾಸಿನೊಳಗೆ ಯುದ್ಧ ಕೊನೆ

ಕದನ ವಿರಾಮ ಮಾಡದಿದ್ದರೆ ವ್ಯಾಪಾರವನ್ನು ನಿಲ್ಲಿಸುವುದಾಗಿ ಭಾರತ ಪ್ರಧಾನಿ ನರೇಂದ್ರ ಮೋದಿ, ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಸೇನಾ ಮುಖ್ಯಸ್ಥ ಅಸೀಮ್ ಮುನೀರ್‌ಗೆ ಎಚ್ಚರಿಸಿರುವುದಾಗಿ ಟ್ರಂಪ್ ಹೇಳಿದ್ದಾರೆ.'ಎರಡೂ ರಾಷ್ಟ್ರಗಳು ನಮ್ಮ ಮಾತಿಗೆ ಬದ್ಧವಾಗಿ ನಡೆದುಕೊಂಡಿತ್ತು. 24 ತಾಸಿನೊಳಗೆ ಯುದ್ಧ ಕೊನೆಗೊಂಡಿತ್ತು. ಈ ರೀತಿಯಾಗಿ ಟ್ರಂಪ್ ಮತ್ತೆ ಮತ್ತೆ ತನ್ನಿಂದಲೇ ಯುದ್ಧ ನಿಂತಿತು ಎಂದು ಹೇಳಿಕೊಳ್ಳುವ ಮೂಲಕ ಸುದ್ದಿಯಾಗುತ್ತಿದ್ದಾರೆ.

# ಆರ್‌ಎಸ್‌ಎಸ್ ಕೆಲವು ಬದಲಾವಣೆ ಮಾಡಿಕೊಳ್ಳಬೇಕು: ಡಿಕೆಸು ಸಲಹೆ

• ಉದಯವಾಹಿನಿ ಬೆಂಗಳೂರು

ದೊಣ್ಣೆ ಹಿಡಿದುಕೊಂಡು ಪಥ ಸಂಚಲನ ಮಾಡುವುದಕ್ಕೆ ನಮ್ಮ ವಿರೋಧವಿದೆ. ಹಾಗಾಗಿ ಇಂದು ಆರ್ ಎಸ್ ಎಸ್ ಕೆಲವು ಬದಲಾವಣೆ ಮಾಡಿಕೊಳ್ಳಬೇಕು ಎಂದು ಮಾಜಿ ಸಂಸದ ಹಾಗೂ ಹಿರಿಯ ಕಾಂಗ್ರೆಸ್ ನಾಯಕ ಡಿಕೆ ಸುರೇಶ್ ಸಲಹೆ ನೀಡಿದರು. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಆರ್ ಎಸ್ ಎಸ್ ಕಾರ್ಯಕ್ರಮಕ್ಕೆ ಅನುಮತಿ ವಿಚಾರಕ್ಕೆ ನ್ಯಾಯಾಲಯ ತಡೆಯಾಜ್ಞೆ ನೀಡಿರುವ ಬಗ್ಗೆ ಕೇಳಿದಾಗ, ಆರ್ ಎಸ್ ಎಸ್ ಪಥಸಂಚಲನಕ್ಕೆ ಯಾವುದೇ ಕಡಿವಾಣ ಹಾಕಿಲ್ಲ. ದೊಣ್ಣೆ ಹಿಡಿದುಕೊಂಡು ಮಾಡುವ ಪಥ ಸಂಚಲನಕ್ಕೆ ವಿರೋಧವಿದೆ'' ಎಂದು ತಮ್ಮ ಅಭಿಪ್ರಾಯ ತಿಳಿಸಿದರು.

**ದೊಣ್ಣೆ ಜತೆ ಪಥ ಸಂಚಲನಕ್ಕೆ ವಿರೋಧ**

ದೊಣ್ಣೆ ಹಿಡಿದುಕೊಂಡು ಮಾಡುವ ಪಥಸಂಚಲನ ಹಿಂದಿನ ಕಾಲದಲ್ಲಿ ಸರಿ ಎನಿಸುತ್ತಿತ್ತು. ಬೇರೆಯವರು ಇದೇ ಸಂದರ್ಭದಲ್ಲಿ ಲಾಠಿ ಹಿಡಿದು ಓಡಾಡುವುದಕ್ಕೆ ಅವಕಾಶ ನೀಡುತ್ತೀರಾ ಎನ್ನುವುದು ಇಲ್ಲಿನ ಪ್ರಶ್ನೆ ಎಂದರು. ಇವರು ದೊಣ್ಣೆ ಹಿಡಿದು ಓಡಾಡುತ್ತಾರೆ. ಬೇರೆ ಸಮುದಾಯ, ಸಂಘಟನೆಗಳು ಇದೇ ಕೆಲಸ ಮಾಡಿದರೆ ಆಗ ಏನಾಗುತ್ತದೆ ಎನ್ನುವುದನ್ನು ಚಿಂತನೆ ಮಾಡಬೇಕಾದ ಕಾಲವಿದು. ಅದರ ಬಗ್ಗೆ ಸ್ಪಷ್ಟನೆ ನೀಡಬೇಕಿದೆ ಎಂದರು.

ಈ ಮೊದಲು ಆರ್‌ಎಸ್‌ಎಸ್‌ನವರು ಚಡ್ಡಿ ಹಾಕುತ್ತಿದ್ದರು. ಈಗ ಪ್ಯಾಂಟ್ ಧರಿಸುತ್ತಿದ್ದಾರೆ. ಅಂದರೆ ಬದಲಾವಣೆಗಳನ್ನು ಅವರೂ ಸಹ ಮಾಡಿಕೊಳ್ಳಬೇಕು. ನಾನು ಅವರಿಗೆ ಹೇಳುವಷ್ಟು ದೊಡ್ಡವನಲ್ಲ. ಅವರೇ ಇದರ ಬಗ್ಗೆ ಅರಿತುಕೊಂಡರೆ ಒಳ್ಳೆಯದು ಎಂದು ಸಲಹೆ ನೀಡಿದರು. ದಲಿತ ಸಿಎಂ ವಿಚಾರ ಮತ್ತೆ ಮುನ್ನೆಲೆಗೆ ಬಂದಿರುವ ಬಗ್ಗೆ ಕೇಳಿದಾಗ, ತಪ್ಪೇನೂ ಇಲ್ಲ. ಸಮಾವೇಶ ಮಾಡುವುದು ತಪ್ಪಲ್ಲ. ಪಕ್ಷದ ಸಂಘಟನೆಗೆ ಇದು ಶಕ್ತಿ ಎಂದರು. ಪಕ್ಷದ ಅಡಿಯಲ್ಲಿಯೇ ಕಾರ್ಯಕ್ರಮ ಮಾಡುತ್ತಾರೆಯೇ ಎಂದು ಕೇಳಿದಾಗ, ಅದು ಅವರವರಿಗೆ ಸಂಬಂಧಪಟ್ಟಿದ್ದು. ಯಾವ ವಿಚಾರವಾಗಿ ಮಾಡುತ್ತಿದ್ದಾರೆ, ಯಾರು



ಮಾಡುತ್ತಿದ್ದಾರೋ ಅವರಿಗೆ ಬಿಟ್ಟಿದ್ದು ಎಂದರು.

ಗಾಂಧಿ ಭಾರತ ಕಾರ್ಯಕ್ರಮ ನಡೆಯುವ ವೇಳೆಯಲ್ಲಿಯೇ ನೂರು ಕಾಂಗ್ರೆಸ್ ಕಚೇರಿಗಳನ್ನು ಕಟ್ಟಬೇಕು ಎಂದು ತೀರ್ಮಾನ ಮಾಡಲಾಗಿತ್ತು. ಎಲ್ಲೆಲ್ಲಿ ನಿವೇಶನಗಳಿವೆಯೋ ಅಲ್ಲೆಲ್ಲಾ ಕಚೇರಿ ನಿರ್ಮಾಣಕ್ಕೆ ತಯಾರಿ ಮಾಡಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಯನ್ನು ಪಕ್ಷದ ಅಧ್ಯಕ್ಷರು ಹಾಗೂ ಕಾರ್ಯಾಧ್ಯಕ್ಷರು ನೀಡುತ್ತಾರೆ ಎಂದು ತಿಳಿಸಿದರು.

### ಪಕ್ಷ ಹಾಗೂ ಸರ್ಕಾರ ಒಟ್ಟಾಗಿ ಕೆಲಸ ಮಾಡುತ್ತಿವೆ

ಒಬ್ಬ ನಾಯಕನಿಗೆ ಇರಬೇಕಾದ ಎಲ್ಲಾ ಅವಕಾಶಗಳು ಅವರಿಗಿದೆ. ಎಲ್ಲರಿಗಿಂತ ಗಟ್ಟಿಯಾಗಿ, ಚೆನ್ನಾಗಿ ಓಡಾಡುತ್ತಿದ್ದಾರೆ. ದಿನನಿತ್ಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಉತ್ತಮವಾಗಿ ಆಡಳಿತ ನಡೆಯುತ್ತಿದೆ. ಅವರ ನಾಯಕತ್ವದಲ್ಲಿ ಚುನಾವಣೆ ಎದುರಿಸುವುದರಲ್ಲಿ ತಪ್ಪೇನಿಲ್ಲ ಎಂದು ತಿಳಿಸಿದರು. ಎರಡೂವರೆ ವರ್ಷದ ನಂತರ ಅಧಿಕಾರ ಹಸ್ತಾಂತರ ಎನ್ನುವ ವಿಚಾರದ ಬಗ್ಗೆ ಕೇಳಿದಾಗ, ನನಗೆ ಇದರ ಬಗ್ಗೆ ಹೆಚ್ಚು ಮಾಹಿತಿಯಿಲ್ಲ. ಇದು ಎರಡೂವರೆ ವರ್ಷದ ವಿಚಾರವಲ್ಲ. ಐದು ವರ್ಷಗಳ ಕಾಲ ಕೆಲಸ ಮಾಡಿ ಎಂದು ಜನ ಆಶೀರ್ವಾದ ಮಾಡಿದ್ದಾರೆ. 140 ಸ್ಥಾನಗಳನ್ನು ಕೊಟ್ಟಿದ್ದಾರೆ. ನಾವು ಜನರ ಹಿತವನ್ನು ಕಾಯಬೇಕು. ಕೊಟ್ಟಿರುವ ಮಾತು ಉಳಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಪಕ್ಷ ಹಾಗೂ ಸರ್ಕಾರ ಒಟ್ಟಾಗಿ ಕೆಲಸ ಮಾಡುತ್ತಿವೆ ಎಂದರು.

# ಡಿಕೆ ಶಿವಕುಮಾರ್, ಸತೀಶ್ ಜಾರಕಿಹೊಳಿ ಯಾರೂ 'ಮುಂದಿನ ಸಿಎಂ' ಅಲ್ಲ

## ■ ಎಲ್ಲರೂ ಒಪ್ಪುವ ನಾಯಕರನ್ನು ಮುಂದಿನ ಮುಖ್ಯಮಂತ್ರಿ ಮಾಡಲು ಹೊರಟಿದೆ ಹೈಕಮಾಂಡ್

• ಉದಯವಾಹಿನಿ ಬೆಂಗಳೂರು

ನವೆಂಬರ್ ಕ್ರಾಂತಿಯ ಗುಮ್ಮ, ಕರ್ನಾಟಕ ಕಾಂಗ್ರೆಸ್ಸಿನಲ್ಲಿ ಬಹುವಾಗಿ ಕಾಡುತ್ತಿದೆ. ಬಿಹಾರದ ವಿಧಾನಸಭಾ ಚುನಾವಣೆ ಮುಗಿದ ಬೆನ್ನಲ್ಲೇ, ಕರ್ನಾಟಕ ರಾಜಕೀಯದಲ್ಲಿ ಮಹತ್ವದ ಬದಲಾವಣೆ ಆಗುವುದು ಸತ್ಯ..ಸತ್ಯ..ಸತ್ಯ.. ಎಂದು ಕಾಂಗ್ರೆಸ್ ನಾಯಕರೇ ಹೇಳುತ್ತಿದ್ದಾರೆ. ಹಾಗಾಗಿ, ಸ್ವಾಭಾವಿಕವಾಗಿ ಇದಕ್ಕೆ ರೆಕ್ಕೆಪುಕ್ಕ ಸುದ್ದಿಗಳು ಹುಟ್ಟಿಕೊಳ್ಳುತ್ತಿವೆ.

ವಿಜಯಪುರದ ಶಾಸಕ ಮತ್ತು ಬಿಜೆಪಿಯಿಂದ ಉಚ್ಚಾಟಿತರಾಗಿರುವ ಬಸನಗೌಡ ಪಾಟೀಲ್ ಯತ್ನಾಳ್, ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರನ್ನು ಟೀಕಿಸುತ್ತಾ, ಕಾಂಗ್ರೆಸ್ಸಿನಲ್ಲಿ ಮುಂದಿನ ಮುಖ್ಯಮಂತ್ರಿ ಯಾರಾಗಬಹುದು ಎನ್ನುವುದರ ಬಗ್ಗೆ ಶಾಕಿಂಗ್ ಹೇಳಿಕೆ ನೀಡಿದ್ದಾರೆ.

ಈಗ ಚರ್ಚೆಯಲ್ಲಿರುವ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅಥವಾ ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ್ ಜಾರಕಿಹೊಳಿ, ಇವರಿಬ್ಬರಲ್ಲಿ ಯಾರನ್ನೂ ಕಾಂಗ್ರೆಸ್ ಹೈಕಮಾಂಡ್, ಮುಂದಿನ ಸಿಎಂ ಆನ್ನಾಗಿ ಮಾಡುವುದಿಲ್ಲ, ಬರೆದಿಟ್ಟುಕೊಳ್ಳಿ ಎಂದು ಹೇಳಿದ್ದಾರೆ.

**ಯತ್ನಾಳ್ ಹೇಳಿದ ಬ್ಲ್ಯಾಕ್ ಹಾರ್ಸ್ ಯಾರು?**

ನಾನೇನು ಕಾಂಗ್ರೆಸ್ ವಕ್ತಾರನಲ್ಲ, ಆದರೆ ನನಗಿರುವ ಮಾಹಿತಿಯ ಪ್ರಕಾರ, ಈಗ ಚಲಾವಣೆಯಲ್ಲಿರುವ ಯಾವ ಹೆಸರೂ ಮುಂದಿನ ಮುಖ್ಯಮಂತ್ರಿ ಹುದ್ದೆಗೆ ಬರುವುದಿಲ್ಲ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರೇ ಮುಂದಿನ ಮುಖ್ಯಮಂತ್ರಿ, ಅವರೇ ಬ್ಲ್ಯಾಕ್ ಹಾರ್ಸ್ ಆಗಿ ಬರಲಿದ್ದಾರೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.



### ಕರ್ನಾಟಕ ಕಾಂಗ್ರೆಸ್ಸಿನಲ್ಲಿ ಬಣ ರಾಜಕೀಯ

ವೋಟ್ ಚೋರಿ ಸಂಬಂಧ, ರಾಹುಲ್ ಗಾಂಧಿ ದೊಡ್ಡ ಮಟ್ಟದ ಹೋರಾಟ ನಡೆಸುತ್ತಿದ್ದ ಸಂದರ್ಭದಲ್ಲಿ ಇಂತಹ ಒಂದು ಮಾತುಗಳು ಕೇಳಿ ಬರುತ್ತಿದ್ದವು. ಇದಕ್ಕೆ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಕೂಡಾ ಏನೂ ತಕರಾರನ್ನು ಎತ್ತಿರಲಿಲ್ಲ ಎನ್ನುವ ಮಾತು ಚಾಲ್ತಿಯಲ್ಲಿದ್ದವು. ಆದರೆ, ವಯಸ್ಸಿನ ಕಾರಣಕ್ಕಾಗಿ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಹುದ್ದೆ ಒಲ್ಲೆ ಎನ್ನುತ್ತಿದ್ದಾರೆ ಎನ್ನುವ ಮಾತುಗಳು ಕಾಂಗ್ರೆಸ್ ಪಡಶಾಲೆಯಲ್ಲಿ ಕೇಳಿ ಬರುತ್ತಿತ್ತು. ಇವರನ್ನು ಹೊರತು ಪಡಿಸಿ, ಬೇರೆ ಹೆಸರನ್ನು ಸೂಚಿಸಿದರೆ, ಕರ್ನಾಟಕ ಕಾಂಗ್ರೆಸ್ಸಿನಲ್ಲಿ ಬಣ ರಾಜಕೀಯ ತಾರಕಕ್ಕೇರುವ ಸಾಧ್ಯತೆಯೇ ಹೆಚ್ಚು ಎನ್ನುವುದು ಕಾಂಗ್ರೆಸ್ ಹೈಕಮಾಂಡಿಗೂ ತಿಳಿದಿದೆ ಎನ್ನುವುದು ಕಾಂಗ್ರೆಸ್ಸಿನಲ್ಲಿ ಚರ್ಚೆಯಲ್ಲಿರುವ ವಿಷಯ.

ಅಸಲಿಗೆ, ಮಲ್ಲಿಕಾರ್ಜುನ ಖರ್ಗೆಯವರ ಹೆಸರು ಹಿಂದಿನಿಂದಲೂ ಕೇಳಿ ಬರುತ್ತಿತ್ತು. ಅವರ ಹೆಸರನ್ನು ಅಂತಿಮಗೊಳಿಸಿದರೆ, ರಾಜ್ಯ ಕಾಂಗ್ರೆಸ್ಸಿನಲ್ಲಿ ಇದೆ ಎನ್ನಲಾಗುತ್ತಿರುವ ಯಾವ ಬಣವೂ ಸಹ ತಕರಾರು ಎತ್ತುವುದಿಲ್ಲ ಎನ್ನುವ ಮಾತು ಚಾಲ್ತಿಯಲ್ಲಿತ್ತು.

ಈಗ, ಅದಕ್ಕೆ ಪೂರಕ ಎನ್ನುವಂತೆ ಯತ್ನಾಳ್ ಕೂಡಾ ಅವರ ಹೆಸರನ್ನೇ ಉಲ್ಲೇಖಿಸಿದ್ದಾರೆ. ಈ ನಡುವೆ, 2028ರಲ್ಲಿ ಚುನಾವಣಾ ರಾಜಕೀಯದಿಂದ ಹಿಂದಕ್ಕೆ ಸರಿಯುವ ಬಗ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗೊಂದಲ ಮುಂದುವರಿದಿದೆ. ನನ್ನ ಹಿತೈಶಿಗಳು, ನನ್ನ ಸ್ನೇಹಿತರು, ರಾಜಕೀಯದಿಂದ ನಿವೃತ್ತಿ ಹೊಂದಬಾರದು ಎಂದು ಬಲವಂತ ಮಾಡುತ್ತಿದ್ದಾರೆ ಎಂದು ಖುದ್ದು ಸಿಎಂ ಹೇಳಿದ್ದರು.

ಸಚಿವ ಸಂಪುಟ ವಿಸ್ತರಣೆ, ಮುಖ್ಯಮಂತ್ರಿ ಬದಲಾವಣೆ, ಸರ್ಕಾರದ ಖಜಾನೆಯಲ್ಲಿ ದುಡ್ಡು ಇಲ್ಲದೇ ಇರುವುದು, ಇದರಿಂದ ಜನರ ಮೈಂಡ್ ಡೈವರ್ಟ್ ಮಾಡಬೇಕೆನ್ನುವ ಕಾರಣಕ್ಕಾಗಿ, ಸುಮ್ಮನೆ ಆರ್‌ಎಸ್‌ಎಸ್, ಧರ್ಮ ರಾಜಕಾರಣದ ವಿಚಾರವನ್ನು ಕಾಂಗ್ರೆಸ್ ಮುನ್ನಲೆಗೆ ತರುತ್ತಿದೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಆರೋಪಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹12,240/Gram24ct ₹11,220/Gram22ct ಬೆಳ್ಳಿ: ₹152.00/Gram

## ಶ್ರೀ ವಿಜಯದಾಸರ ಚರಿತ್ರೆ, ಕಾರ್ತಿಕ ಮಾಸ ಮಹಾತ್ಮೆ (ಧಾರ್ಮಿಕ ಪ್ರವಚನ)

• ಉದಯವಾಹಿನಿ, ಬೆಂಗಳೂರು



ಸುಬ್ರಹ್ಮಣ್ಯನಗರದ ಶ್ರೀ ವ್ಯಾಸರಾಜ ಮಠ (ಸೋಸಲೆ) ವತಿಯಿಂದ ಅಕ್ಟೋಬರ್ 30 ರಿಂದ ನ. 7ರ ವರೆಗೆ ಪ್ರತಿದಿನ ಸಂಜೆ 6-00ಕ್ಕೆ ಶ್ರೀ ಕಲ್ಯಾ ಶ್ರೀಕಾಂತಾಚಾರ್ಯರಿಂದ ಶ್ರೀ ವಿಜಯದಾಸರ ಚರಿತ್ರೆ ಹಾಗೂ ಕಾರ್ತಿಕ ಮಾಸ ಮಹಾತ್ಮೆ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ.

ಸ್ಥಳ : ಶ್ರೀ ವ್ಯಾಸರಾಜ ಮಠ (ಸೋಸಲೆ) 5ನೇ ಮುಖ್ಯರಸ್ತೆ, ಸುಬ್ರಹ್ಮಣ್ಯನಗರ, ರಾಜಾಜಿನಗರ 2ನೇ ಹಂತ ಬೆಂಗಳೂರು-560010

## ಹೈಕಮಾಂಡ್ ತೀರ್ಮಾನವೇ ಅಂತಿಮ: ಭೈರತಿ ಸುರೇಶ್

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು ಯಾರಾಗುತ್ತಾರೆ ಎನ್ನುವ ತೀರ್ಮಾನವನ್ನು ಹೈಕಮಾಂಡ್ ಕೈಗೊಳ್ಳಲಿದೆ. ಆದರೆ, 2028ರ ವಿಧಾನಸಭೆ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ಸ್ಪರ್ಧೆ ಮಾಡುವುದು ಖಚಿತ' ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹೇಳಿದರು. ಕಾಂಗ್ರೆಸ್ ಪಕ್ಷದ ವತಿಯಿಂದ ಕೆ.ಆರ್.ಪುರದಲ್ಲಿ ಹಮ್ಮಿಕೊಂಡಿದ್ದ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ಚುನಾವಣೆಗೆ ಸಂಬಂಧಿಸಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಒಂದು ವಾರದಿಂದಲೂ ರಾಜ್ಯ ರಾಜಕಾರಣದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಆನೇಕ ಚರ್ಚೆಗಳು ನಡೆಯುತ್ತಿವೆ. ವಿರೋಧ ಪಕ್ಷದವರು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವೆ ರಾಜಕೀಯ ಸಂಬಂಧ ಹಳಸಿದೆ ಎಂದು ಇಲ್ಲಸಲ್ಲದ ಹೇಳಿಕೆ ನೀಡುತ್ತಿದ್ದಾರೆ. ಇಬ್ಬರ ನಡುವಿನ ಸಂಬಂಧ ಚೆನ್ನಾಗಿದ್ದು, ಈ ವಿಚಾರವಾಗಿ ಮುಖಂಡರು, ಕಾರ್ಯಕರ್ತರು ತಲೆಕೆಡಿಸಿಕೊಳ್ಳಬೇಡಿ ಎಂದು ಹೇಳಿದರು. ಸಿದ್ದರಾಮಯ್ಯ ಮುಂದೆ ಚುನಾವಣೆಗೆ ನಿಲ್ಲುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಒಳಿತಾಗಬೇಕು ಎನ್ನುವ ದೃಷ್ಟಿಯಿಂದಾದರೂ ಅವರು ಚುನಾವಣೆ ಕಣದಿಂದ ಹಿಂದೆ ಸರಿಯಬಾರದು. ಸ್ಪರ್ಧೆ ಮಾಡುವಂತೆ ಮನವೊಲಿಸುತ್ತೇವೆ. ಅವರ ರಾಜಕೀಯ ಅನುಭವ ಮಾರ್ಗದರ್ಶನ ಪಕ್ಷಕ್ಕೆ ಬೇಕು' ಎಂದು ಸುರೇಶ್ ಹೇಳಿದರು.

## ರಸ್ತೆ ರಂಪಾಟ ಪ್ರಕರಣ: ಇಬ್ಬರ ಬಂಧನ

• ಉದಯವಾಹಿನಿ, ಬೆಂಗಳೂರು

ರಸ್ತೆ ರಂಪಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಮಾರತ್ ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.ಸೂರಜ್ ಬಿಸ್ವಾಲ್ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಂಡು ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ಅ.25ರಂದು ರಾತ್ರಿ 10ರ ಸುಮಾರಿಗೆ ಸೂರಜ್ ಅವರು ತಮ್ಮ ಸಹೋದರನ ಜತೆಗೆ ಕಾರು ನಿಲುಗಡೆ ಮಾಡಲು ತೆರಳುತ್ತಿದ್ದರು. ಆಗ ಅಡ್ಡ ಬಂದಿದ್ದ ಆರೋಪಿಗಳು, ನಿಮ್ಮ ಕಾರು 50 ಕಿ.ಮೀ. ವೇಗದಲ್ಲಿ ಸಂಚರಿಸುತ್ತಿದೆ' ಎಂಬುದಾಗಿ ಹೇಳಿದ್ದರು.

ಇಲ್ಲ ನಾವು ಕಾರನ್ನು 30 ಕಿ.ಮೀ ವೇಗದಲ್ಲಿ ಓಡಿಸುತ್ತಿದ್ದೇವೆ' ಎಂದು ಸೂರಜ್ ಪ್ರತಿಕ್ರಿಯಿಸಿದ್ದರು. ಆಗ ಆರೋಪಿಗಳು ಹಾಗೂ ದೂರುದಾರರ ನಡುವೆ ವಾಗ್ವಾದ ನಡೆದಿತ್ತು. ದೂರುದಾರ ಹಾಗೂ ಅವರ ಸಹೋದರನ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿ ಆರೋಪಿಗಳು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು. ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದ ವೀಡಿಯೋ ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಲಾಯಿತು ಎಂದು ಅವರು ಹೇಳಿದರು.

## ಸರ್ಕಾರಿ ಬಸ್‌ಗಳ ಸುರಕ್ಷತೆ ಪರಿಶೀಲನೆಗೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಆದೇಶ




• ಉದಯವಾಹಿನಿ, ಬೆಂಗಳೂರು

ಇತ್ತೀಚೆಗೆ ಕರ್ನೂಲ್‌ನಲ್ಲಿ ಸಂಭವಿಸಿದ ಬಸ್ ಅಪಘಾತದಲ್ಲಿ 20 ಜನರು ಸಜೀವ ದಹನಗೊಂಡ ಹಿನ್ನೆಲೆಯಲ್ಲಿ, ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳ ಎಲ್ಲಾ ಬಸ್‌ಗಳ ಸುರಕ್ಷತೆ ಕುರಿತು ಪರಿಶೀಲನೆ ನಡೆಸುವಂತೆ ಸಚಿವ ರಾಮಲಿಂಗಾ ರೆಡ್ಡಿ ಆಯಾ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ನಿರ್ದೇಶಿಸಿದ್ದಾರೆ.

ಎಲ್ಲಾ ಬಸ್‌ಗಳ ನವೀಕರಣ ಮತ್ತು ನಿರ್ವಹಣೆಯ ಪರಿಶೀಲನೆಯನ್ನು ಕೈಗೊಳ್ಳುವಂತೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಬೆಂಗಳೂರು ಮಹಾನಗರ ಸಾರಿಗೆ ನಿಗಮ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ ನಿರ್ವಹಿಸುವ ಬಸ್‌ಗಳ ಪರಿಶೀಲನೆ ನಡೆಸುವಂತೆ ಸೂಚಿಸಿದ್ದಾರೆ. ಈ ಸಂಬಂಧ ಅ.28 ರಂದು ಪತ್ರ ಬರೆದಿದ್ದು, ಕರ್ನೂಲ್ ಬಸ್ ದುರಂತವನ್ನು ದುರದೃಷ್ಟಕರ ಎಂದು ಸಚಿವರು ಬಣ್ಣಿಸಿದ್ದು, ರಾಜ್ಯಾದ್ಯಂತ ಎಲ್ಲಾ ಸಾರಿಗೆ ನಿಗಮದ ಬಸ್‌ಗಳಲ್ಲಿನ ಸುರಕ್ಷತಾ ವ್ಯವಸ್ಥೆಗಳನ್ನು ಪರಿಶೀಲಿಸಬೇಕು ಎಂದಿದ್ದಾರೆ. ತಾವು ಸಾರಿಗೆ ಸಚಿವರಾಗಿದ್ದಾಗ ಹಾವೇರಿ ಜಿಲ್ಲೆಯ ಬಳಿ ನಡೆದ ಇದೇ ರೀತಿಯ ಅಪಘಾತದಲ್ಲಿ, ಖಾಸಗಿ ಬಸ್‌ಗೆ ಬೆಂಕಿ ತಗುಲಿ ಹಲವಾರು ಪ್ರಯಾಣಿಕರು ಸಾವಿಗೀಡಾಗಿದ್ದಾರೆ ಎಂದು ನೆನಪಿಸಿಕೊಂಡ ರೆಡ್ಡಿ, ಈ ಘಟನೆಯು ರಾಜ್ಯಾದ್ಯಂತ ಸುರಕ್ಷತಾ ಅಭಿಯಾನಕ್ಕೆ ಕಾರಣವಾಯಿತು ಎಂದು ಹೇಳಿದ್ದಾರೆ.

## ಮನೆ ಕಳ್ಳತನ: ಇಬ್ಬರ ಬಂಧನ; 72 ಲಕ್ಷ ರೂ. ಮೌಲ್ಯದ ಚಿನ್ನ, ಬೆಳ್ಳಿ ವಶ

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಮನೆಗಳ್ಳತನ ಮಾಡುತ್ತಿದ್ದ ಇಬ್ಬರನ್ನು ಬಂಧಿಸಲಾಗಿದ್ದು, ಆರೋಪಿಗಳಿಂದ ಪೊಲೀಸರು ಸುಮಾರು 72 ಲಕ್ಷ ರೂ. ಮೌಲ್ಯದ ಚಿನ್ನ ಮತ್ತು ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಶ್ವಪ್ರಿಯ ಲೇಔಟ್ ನಿವಾಸಿಯೊಬ್ಬರು ಬೇಗೂರು ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ದೂರಿನ ಆಧಾರದ ಮೇಲೆ ತನಿಖೆ ಆರಂಭಿಸಿದ ಪೊಲೀಸರು, ಇಬ್ಬರನ್ನು ಬಂಧಿಸಿದ್ದಾರೆ. ಪೊಲೀಸರ ಪ್ರಕಾರ, ಜೂನ್ 16 ರಂದು, ದೂರುದಾರರು ತಮ್ಮ ಮನೆಗೆ ಬೀಗ ಹಾಕಿ ಉಡುಪಿಗೆ ಹೋಗಿದ್ದರು. ಎರಡು ದಿನಗಳ ನಂತರ ಅವರು ಹಿಂತಿರುಗಿದಾಗ, ಮುಂಭಾಗದ ಬಾಗಿಲು ಒಡೆದು ತೆರೆದಿರುವುದನ್ನು ಅವರು ಗಮನಿಸಿದ್ದಾರೆ. ಪರಿಶೀಲಿಸಿದಾಗ, ಕಪಾಟಿನಲ್ಲಿ ಇರಿಸಲಾಗಿದ್ದ 330 ಗ್ರಾಂ ಚಿನ್ನದ ಆಭರಣಗಳು ಮತ್ತು 1.2 ಕೆಜಿ ಬೆಳ್ಳಿ ವಸ್ತುಗಳನ್ನು ಕಳವು ಮಾಡಿರುವುದು ಕಂಡುಬಂದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ವಾರಗಳ ಕಾಲ ಸಿಸಿಟಿವಿ ದೃಶ್ಯಾವಳಿಗಳನ್ನು ವಿಶ್ಲೇಷಿಸಿ ಮತ್ತು ಗಿರವಿ ವಹಿವಾಟುಗಳನ್ನು ಪತ್ತೆಹಚ್ಚಿದ ನಂತರ, ಮಾಹಿತಿದಾರರ ಮಾಹಿತಿಯ ಆಧಾರದ ಮೇಲೆ ಆಗಸ್ಟ್ 6 ರಂದು ಬೇಗೂರು ಸರೋವರದ ಕೋಲಿಯ ಬಳಿ ಪೊಲೀಸರು ಶಂಕಿತನನ್ನು ಬಂಧಿಸಿದ್ದರು. ವಿಚಾರಣೆಯ ನಂತರ, ಶಂಕಿತನು ತಾನು ಮತ್ತು ತನ್ನ ಸಹಚರರು ಕಳ್ಳತನಕ್ಕೆ ಕಾರಣ ಎಂದು ಒಪ್ಪಿಕೊಂಡಿದ್ದಾನೆ ಎಂದು ಅಧಿಕಾರಿ ಹೇಳಿದ್ದಾರೆ. ಕದ್ದ ಚಿನ್ನವನ್ನು ಕೋಲಾರ ಗೋಲ್ಡ್ ಫೀಲ್ಡ್ಸ್ ಕೆಜಿಎಫ್‌ನಲ್ಲಿರುವ ಮೂರು ಗಿರವಿ ಅಂಗಡಿಗಳಲ್ಲಿ ಒತ್ತೆ ಇಟ್ಟಿರುವುದನ್ನು ಆರೋಪಿ ಬಹಿರಂಗಪಡಿಸಿದನು ಮತ್ತು ತನ್ನ ಸಹಚರನ ವಿವರಗಳನ್ನು ನೀಡಿದನು. ಇದರ ಮೇಲೆ ಕ್ರಮ ಕೈಗೊಂಡ ಪೊಲೀಸರು ಆಗಸ್ಟ್ 18 ಮತ್ತು 19 ರಂದು ಗಿರವಿ ಅಂಗಡಿಗಳಿಂದ 233 ಗ್ರಾಂ ಚಿನ್ನದ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

# ಟನಲ್ ರೋಡ್ ಯೋಜನೆಗೆ ಹೊಸ ಹೆಸರಿಟ್ಟ ತೇಜಸ್ವಿ ಸೂರ್ಯ!

### ಜನರು ಕಾರು ಇಲ್ಲದ ಹುಡುಗನನ್ನು ಮದುವೆಯಾಗಲು ಸಹ ಹಿಂಜರಿಯುತ್ತಾರೆ ಎಂದ ಡಿಕೆ ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಟನಲ್ ರಸ್ತೆ ಯೋಜನೆಯ ಅಗತ್ಯತೆಗಳನ್ನು ಹೇಳುವ ಸಂದರ್ಭದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಅವರು ಜನರು ಕಾರು ಇಲ್ಲದ ಹುಡುಗನನ್ನು ಮದುವೆಯಾಗಲು ಸಹ ಹಿಂಜರಿಯುತ್ತಾರೆ ಎಂದು ಹೇಳಿದ್ದಾರೆ. ಈ ಹೇಳಿಕೆಯು ಭಾರೀ ಚರ್ಚೆಗೆ ಗ್ರಾಸವಾಗಿದೆ.



ಬೆಂಗಳೂರಿನ ಟನಲ್ ರಸ್ತೆ ಯೋಜನೆ ವಿವಾದದ ಬಗ್ಗೆ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ ಭೇಟಿಯಾಗಿ ಚರ್ಚಿಸಿದರು. ನಗರದ ಟ್ರಾಫಿಕ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಸಭೆ ನಡೆಯಿತು. ಸೂರ್ಯ ಅವರು 'ಕಾರ್‌ಗಳಿಗೆ ಮಾತ್ರ' ಮೀಸಲಾದ ಟನಲ್ ರಸ್ತೆ ಯೋಜನೆಯನ್ನು ಕೈಬಿಟ್ಟು, ಬದಲಿಗೆ ಮೆಟ್ರೋ ರೈಲುಗಳಂತಹ ಸಾಮೂಹಿಕ ಸಾರಿಗೆ ವ್ಯವಸ್ಥೆಗಳಲ್ಲಿ ಹೂಡಿಕೆ ಮಾಡುವಂತೆ ಸಲಹೆ ನೀಡಿದರು. ಆದರೆ, ಶಿವಕುಮಾರ್ ಅವರ ಪ್ರತಿಕ್ರಿಯೆ ಎಲ್ಲರನ್ನೂ ಅಚ್ಚರಿಗೊಳಿಸಿತು.

ಜನರು ತಮ್ಮ ಕುಟುಂಬದೊಂದಿಗೆ ತಮ್ಮದೇ ಆದ ವಾಹನಗಳಲ್ಲಿ ಪ್ರಯಾಣಿಸಲು ಬಯಸುತ್ತಾರೆ. ನಾವು ಅವರನ್ನು ತಮ್ಮ ಕಾರುಗಳನ್ನು ಬಳಸದಂತೆ ತಡೆಯಲು ಸಾಧ್ಯವೇ? ಅಗತ್ಯವಿದ್ದರೆ, ಸಂಸದರು ತಮ್ಮ ಮತದಾರರಿಗೆ ತಮ್ಮ ಕಾರುಗಳನ್ನು ಮನೆಯಲ್ಲಿ ಬಿಟ್ಟು ಸಾರ್ವಜನಿಕ ಸಾರಿಗೆಯನ್ನು ಬಳಸುವಂತೆ ಮನವಿ ಮಾಡಬಹುದು. ಎಷ್ಟು ಮಂದಿ ಅದನ್ನು ನಿಜವಾಗಿಯೂ ಪಾಲಿಸುತ್ತಾರೆ ನೋಡೋಣ. ಇಂದು, ಜನರು ಕಾರು ಇಲ್ಲದ ಹುಡುಗನನ್ನು ಮದುವೆಯಾಗಲು ಸಹ ಹಿಂಜರಿಯುತ್ತಾರೆ. ಇಂತಹ ಸಾಮಾಜಿಕ ವಾಸ್ತವಗಳ ಬಗ್ಗೆ ಸಂಸದರಿಗೆ ಅರಿವಿರಬೇಕು ಎಂದು ಹೇಳಿದರು.

**ಮ್ಯಾಟ್ರಿಮೊನಿಯಲ್ ಪ್ರಾಜೆಕ್ಟ್ ಎಂದ ತೇಜಸ್ವಿ ಸೂರ್ಯ**



ಸುರಂಗ ರಸ್ತೆ ಯೋಜನೆಯನ್ನು ಟೀಕಿಸಿರುವ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ, ಇದನ್ನು ಟ್ರಾಫಿಕ್ ಸಮಸ್ಯೆಗೆ ಪರಿಹಾರ ಎನ್ನುವುದಕ್ಕಿಂತ ಮದುವೆ ಮಾಡಿಸುವ ಯೋಜನೆ (ಮ್ಯಾಟ್ರಿಮೊನಿಯಲ್) ಎಂದು ವ್ಯಂಗ್ಯವಾಡಿದ್ದಾರೆ. ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸಂಸದರು, ಬೆಂಗಳೂರಿನ ಮೆಟ್ರೋ ಜಾಲವನ್ನು 300 ಕಿಲೋಮೀಟರ್‌ಗೆ ವಿಸ್ತರಿಸಿ, ಮೂರು ನಿಮಿಷಕ್ಕೊಂದು ರೈಲು ಓಡಿಸುವ ಮತ್ತು ಉಪನಗರ ರೈಲು ವ್ಯವಸ್ಥೆಯನ್ನು 314 ಕಿಲೋಮೀಟರ್‌ಗೆ ಬಲಪಡಿಸುವ ಬಿಜೆಪಿ ಪ್ರಸ್ತಾವನೆಗಳನ್ನು ಶಿವಕುಮಾರ್ ತಿರಸ್ಕರಿಸಿದ್ದಾರೆ ಎಂದು ಆರೋಪಿಸಿದರು. ಈ 600 ಕಿಲೋಮೀಟರ್ ರೈಲು ಮಾರ್ಗಗಳು ದಿನನಿತ್ಯ 60 ರಿಂದ 65 ಲಕ್ಷ ಜನರನ್ನು ಸಾಗಿಸಬಲ್ಲವು ಎಂದು ಅವರು ಹೇಳಿದರು. ಬಿಎಂಟಿಸಿ ಬಸ್ ಸೇವೆಗಳನ್ನು ಸುಧಾರಿಸುವ ಮತ್ತು ಸಣ್ಣ ಖಾಸಗಿ ಬಸ್‌ಗಳನ್ನು ಪರಿಚಯಿಸುವ ಪ್ರಸ್ತಾವನೆಗಳನ್ನೂ ಕಡೆಗಣಿಸಲಾಗಿದೆ ಎಂದು ಅವರು ತಿಳಿಸಿದರು.

## ಸರಕಾರಿ ಜಮೀನಿನಲ್ಲಿ ನಿರ್ಮಿಸಿದ್ದ ರಸ್ತೆ ತೆರವು

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಹೆಸರಘಟ್ಟ ಹೋಬಳಿಯ ಸೊಣ್ಣೇನಹಳ್ಳಿಯ ಸರಕಾರಿ ಇನಾಂ ಜಮೀನಿನಲ್ಲಿ ಗುಡ್ಡ ಅಗೆದು ಅಕ್ರಮವಾಗಿ ನಿರ್ಮಿಸಿದ್ದ ರಸ್ತೆಯನ್ನು ಕಂದಾಯ ಇಲಾಖೆ ಅಧಿಕಾರಿಗಳು ತೆರವುಗೊಳಿಸಿದರು.

ಖಾಸಗಿ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಸರಕಾರಿ ಜಾಗದಲ್ಲಿ ರಾತ್ರೋ ರಾತ್ರಿ ಅಕ್ರಮವಾಗಿ ಡಾಂಬರು ರಸ್ತೆ ನಿರ್ಮಿಸಲಾಗಿತ್ತು. ಈ ಬಗ್ಗೆ ಮಾಹಿತಿ ಪಡೆದ ಕಂದಾಯ ಇಲಾಖೆ ಅಧಿಕಾರಿಗಳು ಪೊಲೀಸ್ ಭದ್ರತೆಯೊಂದಿಗೆ ಜೆಸಿಬಿ ಬಳಸಿ ಬೆಳಗ್ಗೆ ರಸ್ತೆ ತೆರವು ಕಾರ್ಯಾಚರಣೆಗೆ ಮುಂದಾಗಿದ್ದರು. ಈ ವೇಳೆ ಖಾಸಗಿ ಲೇಔಟ್ ಅಭಿವೃದ್ಧಿಪಡಿಸಿದವರು ಹಾಗೂ ಹಿಂಬಾಲಕರು ಭಾರಿ ಸಂಖ್ಯೆಯಲ್ಲಿ ಜಮಾಯಿಸಿ ಕಾರ್ಯಾಚರಣೆಗೆ ಅಡ್ಡಿಪಡಿಸಿದರು. ಅಧಿಕಾರಿಗಳಿಗೆ ಬೆದರಿಕೆ ಹಾಕಿದರು. ಇದರ ಹೊರತಾಗಿಯೂ ಕಾರ್ಯಾಚರಣೆ ಮುಂದುವರಿಯಿತು.

**ಅಕ್ರಮ ಕಟ್ಟಡ ಕೆಡವಿ ಆಸ್ತಿ ವಶ ಬಿಡಿಎ**

ಬೆಂಗಳೂರು ಉತ್ತರ ಜಿಲ್ಲಾ ಉಪವಿಭಾಗಾಧಿಕಾರಿ ಡಾ. ಕಿರಣ್, ಉಪ ತಹಶೀಲ್ದಾರ್ ರಮೇಶ್ ಬಾಬು ಕಂದಾಯ ಇನ್‌ಸ್ಪೆಕ್ಟರ್ ಮಂಜುನಾಥ್ ಎ ಸುರೇಶ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಸರಕಾರಿ ಜಮೀನಿನಲ್ಲಿ ರಸ್ತೆ ನಿರ್ಮಿಸಿರುವುದು ಅಪರಾಧವಾಗಿದೆ. ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಲಾಗಿದೆ. ಬೆದರಿಕೆ ಹಾಕಿದವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ, ಎಂದು ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿಕಾರಿ ಡಾ. ಕಿರಣ್ ಹೇಳಿದ್ದಾರೆ.

## ಜವಳಿ ನೀತಿಗಾಗಿ ತಮಿಳುನಾಡು, ಮಧ್ಯಪ್ರದೇಶ ಮಾದರಿ ಅಧ್ಯಯನ

• ಉದಯವಾಹಿನಿ, ಬೆಂಗಳೂರು



ಮಧ್ಯಪ್ರದೇಶ, ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳ ಜವಳಿ ನೀತಿಯನ್ನು ಅಧ್ಯಯನ ಮಾಡಿ, ಸಮಗ್ರ ವರದಿ ಸಿದ್ಧಪಡಿಸಲು ಜವಳಿ ಸಚಿವ ಶಿವಾನಂದ ಪಾಟೀಲ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಕರ್ನಾಟಕ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ ಅನುಷ್ಠಾನ ಕುರಿತ ಉನ್ನತ ಮಟ್ಟದ ಸಬಲೀಕರಣ ಸಮಿತಿ ಸಭೆಯ ನಂತರ ಈ ಕುರಿತು ಮಾಹಿತಿ ನೀಡಿದ ಅವರು, ನೆರೆ ರಾಜ್ಯಗಳ ಜವಳಿ ಉದ್ಯಮಿಗಳನ್ನು ಆಕರ್ಷಿಸಲು ಅಧ್ಯಯನ ವರದಿ ಅಗತ್ಯವಿದೆ. ಇತರೆ ರಾಜ್ಯಗಳು ಉದ್ಯಮಿಗಳಿಗೆ ಯಾವ ಸವಲತ್ತುಗಳನ್ನು ನೀಡುತ್ತಿವೆ ಎಂಬ ಮಾಹಿತಿಯ ಆಧಾರದಲ್ಲಿ ರಾಜ್ಯದ ನೀತಿಗಳನ್ನು ಬದಲಾವಣೆ ಮಾಡಲಾಗುವುದು ಎಂದರು. ಬಾಂಗ್ಲಾದೇಶದ ಪ್ರತಿಕೂಲ ಪರಿಸ್ಥಿತಿ ಪರಿಣಾಮ ಅಲ್ಲಿನ ಜವಳಿ ಉದ್ಯಮ ಬೇರೆಡೆಗೆ ಸ್ಥಳಾಂತರವಾಗುತ್ತಿದೆ.

ಅಲ್ಲಿನ ಉದ್ಯಮಿಗಳನ್ನು ಕರ್ನಾಟಕಕ್ಕೆ ಸೆಳೆಯಲು ಯೋಜನೆ ರೂಪಿಸಲಾಗುತ್ತಿದೆ. ತಮಿಳುನಾಡಿನಲ್ಲಿ ಉದ್ಯಮ ಸುಸ್ಥಿತಿಯಲ್ಲಿದೆ. ಬಹುತೇಕ ಉದ್ಯಮಿಗಳು ತಮಿಳುನಾಡಿನಲ್ಲಿ ಹೂಡಿಕೆಗೆ ಆಸಕ್ತಿ ತೋರುತ್ತಿದ್ದಾರೆ. ಅವರನ್ನು ಕರ್ನಾಟಕ ರಾಜ್ಯದತ್ತ ಸೆಳೆಯಲು ಏನು ಮಾಡಬೇಕು ಎನ್ನುವ ಕುರಿತು ಅಧ್ಯಯನ ಮಾಡಬೇಕಿದೆ. ಮಹಾರಾಷ್ಟ್ರ ಸರ್ಕಾರ ವಿದ್ಯುತ್ ಬಿಲ್‌ನಲ್ಲೇ ಸಹಾಯಧನ ನೀಡುತ್ತಿದೆ. ನಮ್ಮಲ್ಲಿಯೂ ಈ ಪದ್ಧತಿ ಅನುಸರಿಸಿದರೆ ಮಹಾರಾಷ್ಟ್ರದ ಜವಳಿ ಉದ್ಯಮಿಗಳು ರಾಜ್ಯದಲ್ಲಿ ಬಂಡವಾಳ ಹೂಡಲು ಸಿದ್ಧರಿದ್ದಾರೆ ಎಂದು ಮಾಹಿತಿ ನೀಡಿದರು.

ಉದ್ಯಮಿಗಳಿಂದ ಬರುವ ಪ್ರಸ್ತಾವಗಳಿಗೆ ಮಂಜೂರಾತಿ ನೀಡಲು ವಿಳಂಬ ಮಾಡಬಾರದು.

ರಾಜ್ಯ ಸರ್ಕಾರ ಸವಲತ್ತುಗಳನ್ನು ನೀಡಲು ವಿಳಂಬ ಮಾಡಿದರೆ ಉದ್ಯಮಿಗಳು ನೆರೆ ರಾಜ್ಯಗಳತ್ತ ಗಮನ ಹರಿಸುತ್ತಾರೆ.

ನೆರೆ ರಾಜ್ಯಗಳ ಉದ್ಯಮಿಗಳನ್ನು ಕರ್ನಾಟಕ್ಕೆ ಬರುವಂತೆ ಅಧಿಕಾರಿಗಳು ಆಸಕ್ತಿ ವಹಿಸಲು ಸೂಚಿಸಲಾಗಿದೆ ಎಂದರು.

**ವರದಿ ಸಿದ್ಧವಾದ ನಂತರ ನಾವು ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಮುಂಬರುವ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಕೋರುತ್ತೇವೆ ಎಂದು ಅವರು ಹೇಳಿದರು. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ರಿಯಾಯಿತಿಗಳನ್ನು ಪಡೆಯುವಲ್ಲಿ ಕಬ್ಬನ್‌ಪೇಟೆ ಮತ್ತು ಕಾಟನ್‌ಪೇಟೆಯ ನೇಕಾರರ ಸಮಸ್ಯೆಯನ್ನು ಸರ್ಕಾರ ಪರಿಹರಿಸಲಿದೆ ಎಂದು ಅವರು ಹೇಳಿದರು.**

## ತಾಲ್ಲೂಕಿಗೆ ಮಾಗಡಿಯ 68 ಗ್ರಾಮಗಳು: ಕಂದಾಯ ಇಲಾಖೆ ಆದೇಶ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿಯ 68 ಗ್ರಾಮಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿಗೆ ಸೇರಿಸಿ, ಕಂದಾಯ ಇಲಾಖೆ ಆದೇಶ ಹೊರಡಿಸಿದೆ. 68 ಗ್ರಾಮಗಳನ್ನು ನೆಲಮಂಗಲ ತಾಲ್ಲೂಕಿಗೆ ಸೇರಿಸಲು ಸೆಪ್ಟೆಂಬರ್ 9ರಂದು ಕರಡು ಅಧಿಸೂಚನೆ ಹೊರಡಿಸಿ, ಆಕ್ಷೇಪಣೆಗೆ ಅವಕಾಶ ಕಲ್ಪಿಸಲಾಗಿತ್ತು. ಅವುಗಳನ್ನು ಪರಿಗಣಿಸಿ, ಅ.27ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

**ಮಾಗಡಿ ತಾಲ್ಲೂಕಿನಿಂದ ನೆಲಮಂಗಲ ತಾಲ್ಲೂಕಿಗೆ ಸೇರ್ಪಡೆಯಾದ ಗ್ರಾಮಗಳು ಹೀಗಿವೆ:** ಸೋಲೂರು, ಕಲ್ಯಾಣಪುರ, ತೂಬರಪಾಳ್ಯ, ಎಣ್ಣೆಗೆರೆ, ಚಿಕ್ಕನಹಳ್ಳಿ, ವಡ್ಡರಹಳ್ಳಿ, ಗಂಗೇನಪುರ, ಕನಕೇನಹಳ್ಳಿ, ಭೈರಾಪುರ, ಮಲ್ಲಿಕಾರ್ಜುನ ಪಾಳ್ಯ, ಲಕ್ಕೇನಹಳ್ಳಿ, ಬೀರವಾರ ಮತ್ತು ಕೋರಮಂಗಲ, ಕನ್ನಸಂದ್ರ, ಪರ್ವತಪಾಳ್ಯ, ಗುಡೇಮಾರನಹಳ್ಳಿ, ಉಡುಕುಂಟೆ, ಮೈಲನಹಳ್ಳಿ, ಪಾಲನಹಳ್ಳಿ, ಶಾಂತಪುರ, ಕಲ್ಲಹಟ್ಟಿಪಾಳ್ಯ, ಭೈರಸಂದ್ರ, ಮಲ್ಲೂರು, ಭಂಟರಕುಪ್ಪೆ, ನಾಗನಹಳ್ಳಿ, ಮುಮ್ಮೇನಹಳ್ಳಿ, ಬೊಮ್ಮನಹಳ್ಳಿ, ತೊರೆಚನ್ನೋಹಳ್ಳಿ, ವೋಟಗೊಂಡನಹಳ್ಳಿ, ಗೊಲ್ಲಹಳ್ಳಿ, ಕೊತ್ತಗೊಂಡನಹಳ್ಳಿ, ಮರೇನಹಳ್ಳಿ, ಗರ್ಗೇಶ್ವರಪುರ, ಕೋಡಿಹಳ್ಳಿ, ಪೆಮ್ಮನಹಳ್ಳಿ, ಹಕ್ಕಿನಾಳು, ಮರಿಕುಪ್ಪೆ, ಬಸವನೇನಹಳ್ಳಿ, ಹೊಸಹಳ್ಳಿ, ಬಾಣವಾಡಿ, ಹಾಲೂರು, ಶಿರಗನಹಳ್ಳಿ, ಮಲ್ಲಾಪುರ, ಮೂಗನಹಳ್ಳಿ, ಬಿಟ್ಟಸಂದ್ರ, ಹೇಮಾಪುರ, ರಂಗೇನಹಳ್ಳಿ, ಕೆಂಪಾಪುರ, ತಟ್ಟೆಕೆರೆ, ಲಿಂಗೇನಹಳ್ಳಿ, ತಿಮ್ಮಸಂದ್ರ, ಗೊರೂರು, ರಂಗನಬೆಟ್ಟ, ಮುಪ್ಪೇನಹಳ್ಳಿ, ಚನ್ನೋಹಳ್ಳಿ, ಅರಿಶಿನ ಕುಂಟೆ, ಊದ್ದಂಡಳ್ಳಿ, ಚಿಕ್ಕಸೋಲೂರು, ಹ್ಯಾಗನಹಳ್ಳಿ, ಬ್ಯಾಡರಹಳ್ಳಿ, ಕೂಡ್ಲುರು, ಸೋಮೇದೇವನಹಳ್ಳಿ, ಒಂಭತ್ತನಕುಂಟೆ, ಕುಪ್ರೇಮಾಳ, ತಿರುಮಲಾಪುರ, ಹೊಸೂರು.

## ಸುರಂಗ ರಸ್ತೆಗೆ ಮರ ಕತ್ತರಿಸುವಂತಿಲ್ಲ: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೂ ಸುರಂಗ ರಸ್ತೆ ನಿರ್ಮಾಣ ಯೋಜನೆಗೆ ಸಂಬಂಧಿಸಿದಂತೆ ಲಾಲ್‌ಬಾಗ್‌ನಲ್ಲಿ ಯಾವುದೇ ಮರಗಳನ್ನು ಕಡಿಯುವುದಿಲ್ಲ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ. ಯೋಜನೆಗೆ ಸಂಬಂಧಿಸಿದ ಟೆಂಡರ್ ಅಧಿಸೂಚನೆ ರದ್ದುಪಡಿಸಬೇಕು ಎಂದು ಕೋರಿ ಚಲನಚಿತ್ರ ನಟ ಪ್ರಕಾಶ್ ಬೆಳವಾಡಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಿದ್ದ ಅಡ್ವಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರನ್ನು ನ್ಯಾಯಪೀಠ ಮತ್ತು ಲಾಲ್‌ಬಾಗ್‌ನಲ್ಲಿ ಮರಗಳನ್ನು ಕತ್ತರಿಸಲಾಗುತ್ತಿದೆಯೇ ಎಂದು ಪ್ರಶ್ನಿಸಿತು. ಇದಕ್ಕೆ ಶಶಿಕಿರಣ ಶೆಟ್ಟಿ ಇಲ್ಲ ಎಂದು ಉತ್ತರಿಸಿದರು. ಇದನ್ನು ಮನ್ನಿಸಿದ ನ್ಯಾಯಪೀಠ, ಮುಂದಿನ ವಿಚಾರಣೆಯವರೆಗೆ ಲಾಲ್‌ಬಾಗ್‌ನಲ್ಲಿ ಯಾವುದೇ ಮರಗಳನ್ನು ಕತ್ತರಿಸುವುದಿಲ್ಲ ಎಂದು ಅಡ್ವಕೇಟ್ ಜನರಲ್ ತಿಳಿಸಿದ್ದಾರೆ.

ಹೀಗಾಗಿ, ಯಾವುದೇ ಮಧ್ಯಂತರ ಆದೇಶದ ಅಗತ್ಯವಿಲ್ಲ ಎಂದು ನುಡಿಯಿತು. ಅರ್ಜಿದಾರರ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಡಿ.ಆರ್. ರವಿಶಂಕರ್ ಮತ್ತು ಸಂಸದ ತೇಜಸ್ವಿ ಸೂರ್ಯ ಅವರು, ಯೋಜನೆ ಇನ್ನೂ ಕಾಗದದ ಮೇಲಷ್ಟೇ ಇದೆ. ಇದು ಕಾರ್ಯಗತ ಆಗಬೇಕಿರುವ ಯೋಜನೆಯಾದರೂ ಸರ್ಕಾರ ಈಗಾಗಲೇ ಟೆಂಡರ್ ಪ್ರಕ್ರಿಯೆ ಆರಂಭಿಸಿದೆ ಎಂದು ಆಕ್ಷೇಪಿಸಿದರು.

**ಸೊಸೈಟಿ ಕಾನೂನು ಬದ್ಧತೆ ಪ್ರಶ್ನೆ: ನೋಟಿಸ್**

**ಕರ್ನಾಟಕ ನೌಕರರ ರಾಜ್ಯ ವಿಮಾ ಸೊಸೈಟಿ' ನೋಂದಣಿಯ ಕಾನೂನು ಬದ್ಧತೆ ಮತ್ತು ಸಿಂಧುತ್ವವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ. ಈ ಸಂಬಂಧ ಡಿ.ವಿ.ದೊರೈ ರಾಯನ ಗೌಡ ಸೇರಿದಂತೆ ಒಟ್ಟು 160 ಜನ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.**

ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್ 9ಕ್ಕೆ ಮುಂದೂಡಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ಡಿ.ಆರ್.ರವಿಶಂಕರ್ ಮತ್ತು ಸಂಸದರೂ ಆದ ವಕೀಲ ತೇಜಸ್ವಿ ಸೂರ್ಯ ಹಾಜರಿದ್ದರು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಡಿ.ಆರ್.ರವಿಶಂಕರ್ ಅವರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ರಾಜ್ಯ ವಿಮಾ ಯೋಜನೆಯ ವೈದ್ಯಕೀಯ ಸೇವೆಗಳ ಇಲಾಖೆಯ ಆಯುಕ್ತರು, ಇಎಸ್‌ಐ ನಿಗಮ, ಇಎಸ್‌ಐ ಸೊಸೈಟಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು. ಕಾರ್ಮಿಕ ರಾಜ್ಯ ವಿಮಾ ಯೋಜನೆಯ ವೈದ್ಯಕೀಯ ಸೇವೆಗಳ ಇಲಾಖೆ ರಚಿಸಿರುವ ಈ ಕಾನೂನನ್ನು ಪ್ರಶ್ನಿಸಿರುವ ಅರ್ಜಿದಾರರು ರಾಜ್ಯದ ವಿವಿಧ ಇಎಸ್‌ಐ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಬಿ.ಎಂ. ಸಂತೋಷ್ ವಕಾಲತ್ತು ವಹಿಸಿದ್ದಾರೆ.

## ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ಬಗ್ಗೆ ಮಾತಾಡದೇ ಬಾಯಿಮುಚ್ಚಿಕೊಂಡು ಇರ್ಬೇಕು: ಬೋಸರಾಜು

• ಉದಯವಾಹಿನಿ, ಬೆಂಗಳೂರು



ನಾಯಕತ್ವ ಬದಲಾವಣೆ ಮತ್ತು ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಬೇರೆ ಯಾರು ಈ ಬಗ್ಗೆ ಮಾತಾಡದೇ ಬಾಯಿ ಮುಚ್ಚಿಕೊಂಡು ಸುಮ್ಮನೆ ಇರಬೇಕು ಎಂದು ಸ್ವಪಕ್ಷದವರ ವಿರುದ್ಧವೇ ಸಚಿವ ಬೋಸರಾಜು ಆಕ್ರೋಶ ಹೊರಹಾಕಿದ್ದಾರೆ.

ನಾಯಕತ್ವ ಬದಲಾಣೆ ಮತ್ತು ಸಂಪುಟ ವಿಸ್ತರಣೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಯಾರು ಏನೇ ಹೇಳಿದ್ರು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ನಾನು 25 ವರ್ಷ ಕಾಂಗ್ರೆಸ್‌ನಲ್ಲಿ ವಿವಿಧ ಹುದ್ದೆಯಲ್ಲಿ ಕೆಲಸ ಮಾಡಿದ್ದೇನೆ. ಯಾವತ್ತು ನಾನು ಅಧಿಕಾರ ಕೇಳಿಲ್ಲ. ಅಧಿಕಾರ ಬೇಕು ಅಂತ ಬಯೋಡಾಟಾ ರೆಡಿ ಮಾಡಿಲ್ಲ. ಮಂತ್ರಿ ಆಗಬೇಕು ಅಂತ ನಾನು ಶಾಸಕ, ಎಂಎಲ್‌ಸಿ ಆಗಲಿಲ್ಲ. ಫೋನ್ ಮಾಡಿದ್ರು ಬಂದು ಮಂತ್ರಿಯಾದೆ. ಒಂದು ಪಕ್ಷ ಶಿಸ್ತಿನ ರೀತಿ ಇರಬೇಕು. 100 ವರ್ಷದ ಇತಿಹಾಸದ ಪಕ್ಷ. ನಾವು ಮಾತಾಡಿದ ಕೂಡಲೇ ಮಾಧ್ಯಮಗಳು ಕೇಳುತ್ತಾರೆ. ಪರಮೇಶ್ವರ್, ಮುನಿಯಪ್ಪ ಯಾರಿಗೆ ಪ್ರಶ್ನೆ ಕೇಳಿದ್ರು ಒಂದೊಂದು ಹೇಳಿಕೆ ಮಾಧ್ಯಮಗಳಿಗೆ ಹೇಳಿದ್ದಾರೆ. ಸಿಎಂ ಅವರು ಹೈಕಮಾಂಡ್ ಹೇಳಿದಂತೆ ಕೇಳ್ತೀನಿ ಅಂತ ಹೇಳಿದ್ದಾರೆ. ಡಿಸಿಎಂ ಅವರು ಸಿಎಂ ಹೇಳಿದ ಮೇಲೆ ಮುಗೀತು ಅಂದಿದ್ದಾರೆ. ಶಿಸ್ತಿನ ಪಕ್ಷದಲ್ಲಿ ಎಲ್ಲರೂ ಬಾಯಿಮುಚ್ಚಿಕೊಂಡು ಇರಬೇಕು ಎಂದು ಸ್ವಪಕ್ಷದವರಿಗೆ ಕಿವಿಮಾತು ಹೇಳಿದರು. ಹೈಕಮಾಂಡ್ ಇದೆ ಎಲ್ಲವನ್ನು ನೋಡಿಕೊಳ್ಳುತ್ತದೆ. ಎಲ್ಲರು ಮಾತಾಡೋದು ಸರಿಯಲ್ಲ. ಶಾಸಕರಾಗಿ ಶಾಸಕರ ಕೆಲಸ, ಮಂತ್ರಿಯಾಗಿ ಮಂತ್ರಿ ಕೆಲಸ ಮಾಡಬೇಕು. ಇಲ್ಲದೆ ಹೋದರೆ ಬಿಜೆಪಿ ತರಹ ಕಾಂಗ್ರೆಸ್ ಕೂಡಾ 4 ಬಾಗಿಲು ಆಗುತ್ತದೆ. ಅಶೋಕ್, ವಿಜಯೇಂದ್ರ, ಜೋಷಿ ಬಣ ಆದ ಹಾಗೆ ಕಾಂಗ್ರೆಸ್‌ನಲ್ಲೂ ಆಗಬೇಕಾ? ಹೈಕಮಾಂಡ್, ಸಿಎಂ, ಡಿಸಿಎಂ ಹೇಳಿದಾಗೆ ಕೇಳಬೇಕು. ಬಾಯಿ ಮುಚ್ಚಿಕೊಂಡು ಸುಮ್ಮನೆ ಇರಬೇಕು. ಜನರು ನಮಗೆ ಅಧಿಕಾರ ಕೊಟ್ಟಿರೋದು ಜನ ಸೇವೆ ಮಾಡಲು. ಹೈಕಮಾಂಡ್ ಎಲ್ಲವನ್ನು ತೀರ್ಮಾನ ಮಾಡುತ್ತದೆ. ಹೈಕಮಾಂಡ್ ಸಮಯ ಬಂದಾಗ ಹೇಳುತ್ತಾರೆ. ಹೈಕಮಾಂಡ್ ಈಗಾಗಲೇ ಮಾಡಿ ತೋರಿಸಿದೆ. ಅದೇ ರೀತಿ ಕಾದು ಕಾದು ಹೈಕಮಾಂಡ್ ನಿರ್ಧಾರ ಮಾಡುತ್ತದೆ ಎಂದು ತಿಳಿಸಿದರು.

**ಯಾವುದೇ ನಾಯಕರು ಮಾತಾಡೋದು ಸರಿಯಲ್ಲ. ನಾವೆಲ್ಲರು ಬಾಯಿ ಮುಚ್ಚಿಕೊಂಡು ಇರಬೇಕು. ಯಾವುದೇ ಆದರು ಹೈಕಮಾಂಡ್ ಸಮಯ ಬಂದಾಗ ಏನು ಮಾಡಬೇಕೋ ಮಾಡುತ್ತಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಮಾಡಲು ಆಗಿಲ್ಲ. ಮೋದಿ, ಅಮಿತ್ ಶಾ ಇದ್ದರು ಮಾಡಲು ಆಗಿಲ್ಲ. ಇಲ್ಲ ವಿಜಯೇಂದ್ರ ಮುಂದುವರೆತ್ತಾರೆ ಅಂತ ಹೇಳೋರು ಇಲ್ಲ. ಯತ್ನಾಳ್, ಈಶ್ವರಪ್ಪ ಒಂದೊಂದು ಮಾತನಾಡುತ್ತಾರೆ. ಅವರು ನಮ್ಮ ಪಕ್ಷದ ಬಗ್ಗೆ ಮಾತಾಡೋದು ಬೇಡ ಎಂದು ಕಿಡಿಕಾರಿದರು.**

# 103 ಬಸ್ ನಿಲ್ದಾಣಗಳ ಸ್ಥಳಾಂತರಕ್ಕೆ ಶಿಫಾರಸು

### ಹೆಸರಘಟ್ಟ ಹೋಬಳಿಯ ಸೊಣ್ಣೇನಹಳ್ಳಿಯ ಕಂದಾಯ ಇಲಾಖೆ ಇಲಾಖೆ ಅಧಿಕಾರಿಗಳ ಕಾರ್ಯಾಚಣೆ

• ಉದಯವಾಹಿನಿ, ಬೆಂಗಳೂರು




ಉದಯವಾಹಿನಿ ಚಿತ್ರ

ರಾಜಧಾನಿ ಬೆಂಗಳೂರಿನಲ್ಲಿ ಅವೈಜ್ಞಾನಿಕವಾಗಿ ನಿರ್ಮಿಸಲ್ಪಟ್ಟಿರುವ ಸಿಲ್ಕ್ ಬೋರ್ಡ್ ಜಂಕ್ಷನ್, ಎಂ.ಜಿ. ರಸ್ತೆ, ಚಿನ್ನಸ್ವಾಮಿ ಕ್ರೀಡಾಂಗಣ ಸೇರಿದಂತೆ 103 ಬಸ್ ನಿಲ್ದಾಣಗಳನ್ನು ಸ್ಥಳಾಂತರಿಸಿ, ಸಂಚಾರ ದಟ್ಟಣೆಯ ಪ್ರಮಾಣ ತಗ್ಗಿಸಲು ಬೆಂಗಳೂರು ಸಂಚಾರ ಪೊಲೀಸರು ಮುಂದಾಗಿದ್ದಾರೆ.

1.40 ಕೋಟಿ ಜನಸಂಖ್ಯೆ ಹೊಂದಿರುವ ನಗರದಲ್ಲಿ ವಾಹನಗಳ ಸಂಖ್ಯೆಯೂ ಸರಿಸುಮಾರು 1 ಕೋಟಿಗೂ ಹೆಚ್ಚಿದೆ. ಪ್ರತಿನಿತ್ಯ ಲಕ್ಷಾಂತರ ವಾಹನಗಳು ರಸ್ತೆಗೆ ಇಳಿಯುತ್ತಿರುವ ಕಾರಣ ಟ್ರಾಫಿಕ್ ದಟ್ಟಣೆ ಸಮಸ್ಯೆ ಮಿತಿಮೀರಿದೆ. ಇದಲ್ಲದೆ, ಟ್ರಾಫಿಕ್ ಸಿಗ್ನಲ್ ಬಳಿ ಬಸ್ ನಿಲ್ದಾಣಗಳಿರುವುದು ಸಂಚಾರ ದಟ್ಟಣೆಗೆ ಪ್ರಮುಖ ಕಾರಣವಾಗಿದೆ.

ಆದ್ದರಿಂದ ನಗರದ ಎಲ್ಲೆಲ್ಲಿ ಅವೈಜ್ಞಾನಿಕ, ಅಸಮರ್ಪಕ ಬಸ್ ನಿಲ್ದಾಣಗಳಿವೆಯೋ ಅವುಗಳನ್ನು ಸ್ಥಳಾಂತರಿಸಲು ಬೆಂಗಳೂರು ಸಂಚಾರ ಪೊಲೀಸರು, ಬಿಎಂಟಿಸಿ ಅಧಿಕಾರಿಗಳು ಜಂಟಿ ಅಧ್ಯಯನ ಕೈಗೊಂಡು, 103 ನಿಲ್ದಾಣಗಳ ಪಟ್ಟಿ ಸಿದ್ಧಪಡಿಸಿದ್ದಾರೆ. ಈ ನಿಲ್ದಾಣಗಳನ್ನು ಸ್ಥಳಾಂತರಿಸಿದರೆ ದಟ್ಟಣೆ ತುಸು ತಗ್ಗಬಹುದು ಎಂದು ಅಂದಾಜಿಸಲಾಗಿದೆ. ಈಗಾಗಲೇ ಗುರುತಿಸಿರುವ 103 ನಿಲ್ದಾಣಗಳು ಟ್ರಾಫಿಕ್ ಸಿಗ್ನಲ್‌ಗೆ ತೀರಾ ಹತ್ತಿರದಲ್ಲಿವೆ. ಪ್ರಯಾಣಿಕರ ದೃಷ್ಟಿಯಿಂದ ಈ ನಿಲ್ದಾಣಗಳಲ್ಲಿ ಬಸ್‌ಗಳನ್ನು ನಿಲ್ಲಿಸಲೇಬೇಕಾಗಿದೆ. ಹೀಗೆ, ಒಂದು ಬಸ್ ನಿಂತಾಗ ಅದರ ಹಿಂದೆ ಹತ್ತಾರು ವಾಹನಗಳು ಸರತಿ ಸಾಲಿನಲ್ಲಿ ನಿಲ್ಲುತ್ತಿವೆ. ಪ್ರತಿ ಬಾರಿ ಪ್ರಯಾಣಿಕರು ಬಸ್ ಹತ್ತುವಾಗ, ಇಳಿಯುವಾಗ ಈ ಸಮಸ್ಯೆ ಉದ್ಭವಿಸುತ್ತಲೇ ಇದ್ದು, ಭಾರೀ ಸಂಚಾರ ದಟ್ಟಣೆಗೆ ಕಾರಣವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಹೆಚ್ಚಿನ ದಟ್ಟಣೆಯಿಂದ ಕೂಡಿದ ಸಿಗ್ನಲ್ ಗಳಿಗೆ ಸಮೀಪದಲ್ಲಿ ನಿರ್ಮಿಸಿರುವ 103 ಬಸ್ ನಿಲ್ದಾಣಗಳನ್ನು ಕನಿಷ್ಠ 50 ಮೀಟರ್‌ಗಳಿಂದ 300 ಮೀಟರ್‌ಗೆ ಸ್ಥಳಾಂತರಿಸುವ ಅನಿವಾರ್ಯತೆ ಇದೆ ಎಂಬುದನ್ನು ಅಧಿಕಾರಿಗಳು ಅಧ್ಯಯನದಿಂದ ಕಂಡುಕೊಂಡಿದ್ದಾರೆ.

**ಜಿಬಿಎಗೆ ಪತ್ರ:** ನಗರದಲ್ಲಿ ಸಂಚಾರ ದಟ್ಟಣೆ ತಗ್ಗಿಸುವ ಉದ್ದೇಶದಿಂದ ಟ್ರಾಫಿಕ್ ಸಿಗ್ನಲ್ ಸಮೀಪದಲ್ಲಿರುವ 103 ಬಸ್ ನಿಲ್ದಾಣಗಳನ್ನು ಸ್ಥಳಾಂತರಿಸಲು ಗುರುತಿಸಲಾಗಿದೆ. ಸಂಚಾರಕ್ಕೆ ಅಡ್ಡಿಯಾಗುವ ರೀತಿಯಲ್ಲೇ ಕೆಲ ಬಸ್ ನಿಲ್ದಾಣಗಳ ನಿರ್ಮಾಣವಾಗಿವೆ. ಇದರಿಂದ ಬಸ್‌ಗಳು ಒಮ್ಮೆಲೆ ಸಿಗ್ನಲ್‌ಗಳ ಬಳಿ ನಿಲುಗಡೆ ಮಾಡಿದರೆ ಕ್ಷಣಾರ್ಧದಲ್ಲಿ ಟ್ರಾಫಿಕ್ ಉಂಟಾಗಿ, ವಾಹನ ಸವಾರರು ಪರದಾಡಬೇಕಾಗಿದೆ. ಇದಕ್ಕೆ ಪರಿಹಾರ ನೀಡುವಂತೆಯೂ ಜನಾಗ್ರಹ ವ್ಯಕ್ತವಾಗಿತ್ತು.

**ನಗರದಲ್ಲಿ ಇಂತಹ ಬಸ್ ನಿಲ್ದಾಣಗಳ ಸಂಖ್ಯೆ ಹೆಚ್ಚಾಗಿದೆ. ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುವ ಪ್ರದೇಶಗಳಲ್ಲಿನ ನಿಲ್ದಾಣಗಳನ್ನು ಸ್ಥಳಾಂತರಿಸುವುದು ಅನಿವಾರ್ಯವಾಗಿದೆ. ಹೀಗಾಗಿ, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈಗಿರುವ ನಿಲ್ದಾಣಗಳ ಮೂಲ ಸ್ಥಾನದಿಂದ 100 ಮೀಟರ್ ದೂರದಲ್ಲಿ ನಿಲ್ದಾಣ ಸ್ಥಾಪಿಸಲು ಸ್ಥಳ ಗುರುತಿಸಲಾಗಿದೆ. ಜಂಕ್ಷನ್, ತಿರುವು, ಯೂಟರ್ನ್‌ನಂತಹ ರಸ್ತೆಯಲ್ಲಿಯೂ ಬಸ್ ನಿಲ್ದಾಣಗಳಿದ್ದು, ಇವು ಸಂಚಾರ ದಟ್ಟಣೆಗೆ ಬಹುದೊಡ್ಡ ಕೊಡುಗೆ ನೀಡುತ್ತಿವೆ. ಹೀಗಾಗಿ, ಹಾಲಿ ಇರುವ ಬಸ್ ನಿಲ್ದಾಣದಿಂದ 200 ಮೀಟರ್ ದೂರಕ್ಕೆ ಸ್ಥಳಾಂತರಿಸಲು ಪೊಲೀಸ್ ಅಧಿಕಾರಿಗಳು ಶಿಫಾರಸು ಮಾಡಿದ್ದಾರೆ.**

**ರಸ್ತೆಯಲ್ಲಿ ಸಂಚಾರ ದಟ್ಟಣೆಗೆ ಕಾರಣವಾಗುವ ಆಟೋ ಸೇರಿದಂತೆ ಬೇರೆ ಬೇರೆ ವಾಹನಗಳನ್ನು ತ್ವರಿತವಾಗಿ ಮುಂದೆ ಸಾಗುವಂತೆ ಬೆದರಿಸಬಹುದು. ಹೆಚ್ಚು ಹೊತ್ತು ರಸ್ತೆಯಲ್ಲಿ ನಿಂತು ಸಂಚಾರ ದಟ್ಟಣೆಗೆ ಕಾರಣವಾದರೆ, ದಂಡ ವಿಧಿಸಬಹುದು. ಆದರೆ, ಸಾರ್ವಜನಿಕ ಸಾರಿಗೆ ಬಸ್‌ಗಳಿಗೆ ಈ ರೀತಿಯ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಪ್ರಯಾಣಿಕರು ಹತ್ತುವಾಗ, ಇಳಿಯುವಾಗ ಬಸ್‌ಗಳನ್ನು ಮುಂದೆ ಸಾಗುವಂತೆ ನೋಡಿಕೊಳ್ಳಲಾಗುವುದಿಲ್ಲ. ಹೀಗಾಗಿ, ದಟ್ಟಣೆಗೆ ಕಾರಣವಾಗುವ ನಿಲ್ದಾಣಗಳನ್ನು ಸ್ಥಳಾಂತರಿಸುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ ಎಂದು ಬೆಂಗಳೂರು ಸಂಚಾರ ಪೊಲೀಸರು ಮಾಹಿತಿ ನೀಡಿದರು.**

ಅಂತರಾಳದಿಂದ... EDITORIAL

# ಗ್ಯಾರಂಟಿ ಯೋಜನೆಗಳ ಜೊತೆಗೆ ಶಾಸಕರು ನಿಲ್ಲಲಿ

ಇತ್ತೀಚೆಗೆ ಪುತ್ತೂರಿನ ಶಾಸಕರು ಹಮ್ಮಿಕೊಂಡ ಸಮಾವೇಶವೊಂದರಲ್ಲಿ ಭಾರೀ ದುರಂತವೊಂದು ಕೂದಲೆಳೆ ಅಂತರದಲ್ಲಿ ತಪ್ಪಿತು. ದೀಪಾವಳಿಯ ನಿಮಿತ್ತ ಇಲ್ಲಿನ ಶಾಸಕರು 'ಅಶೋಕ ಜನ-ಮನ' ಎನ್ನುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ತಮ್ಮದೇ ಖಾಸಗಿ ಟ್ರಸ್ಟ್‌ನಿಂದ ಈ ಸಮಾವೇಶವನ್ನು ಹಮ್ಮಿಕೊಂಡಿದ್ದು, ಜನ ಸೇರಿಸಲು ಅವರು 'ಉಡುಗೊರೆ'ಯ ಆಮಿಶ ಒಡ್ಡಿದ್ದರು. ಈ ಕಾರ್ಯಕ್ರಮದ ಉದ್ಘಾಟನೆಗಾಗಿ ಖುದ್ದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಆಗಮಿಸಿದ್ದರು. ಮೇಲ್ನೋಟಕ್ಕೆ ಇದು ಕಾಂಗ್ರೆಸ್ ಪಕ್ಷದ ಕಾರ್ಯಕ್ರಮದಂತೆ ಕಂಡರೂ, ಶಾಸಕರು ತಮ್ಮನ್ನು ತಾವೇ ಕ್ಷೇತ್ರದೊಳಗೆ ಬಿಂಬಿಸಿಕೊಳ್ಳಲು ಪ್ರಾಯೋಜಿಸಿದ ಸಮಾವೇಶವಾಗಿತ್ತು. ಇಷ್ಟಕ್ಕೂ ಶಾಸಕರು ಸೇರಿದ ಜನರಿಗೆ ನೀಡಿದ ಉಡುಗೊರೆಯಾದರೂ ಏನು? ಒಂದು ತಟ್ಟೆ ಲೋಟ ಮತ್ತು ಒಂದು ಸಣ್ಣ ಟವೆಲ್. ಒಟ್ಟು ನೂರು ರೂಪಾಯಿ ಬೆಳೆಬಾಳಬಹುದು. ಈ 'ಉಡುಗೊರೆ'ಯನ್ನು ತಮ್ಮದಾಗಿಸಲು ಪುತ್ತೂರಿನ ಕೊಂಬೆಟ್ಟು ಮೈದಾನದಲ್ಲಿ ಐವತ್ತು ಸಾವಿರಕ್ಕೂ ಅಧಿಕ ಜನರು ಸೇರಿದ್ದರು. ಉಡುಗೊರೆಯನ್ನು ಹಂಚುವಾಗ ಜನರನ್ನು ನಿಯಂತ್ರಿಸುವುದು ಕಷ್ಟವಾಯಿತು. ಈ ಸಂದರ್ಭದಲ್ಲಿ ನೂಕು ನುಗ್ಗಲು ಸೃಷ್ಟಿಯಾಗಿ ಹಲವರು ಆಸ್ಪತ್ರೆ ಸೇರಿದರು. ಈ ಅನಾಹುತಕ್ಕೆ ಬೇರೆ ಬೇರೆ ಕಾರಣಗಳನ್ನು ಮುಂದಿಡಲಾಗುತ್ತದೆ. ಉಚಿತ ತಟ್ಟೆ ಲೋಟ ಹಂಚಲು ಜನರನ್ನು ಗಂಟೆಗಟ್ಟಲೆ ಬಿಸಿಲಲ್ಲಿ ಕಾಯುವಂತೆ ಮಾಡಲಾಗಿತ್ತು. ಮುಖ್ಯಮಂತ್ರಿ ಬರುವವರೆಗೂ ಇವರು ಬಿಸಿಲಲ್ಲಿ ಒಣಗಿದರು. ಅವರಿಗೆ ಕುಡಿಯಲು ನೀರಿನ ವ್ಯವಸ್ಥೆಯನ್ನು ಮಾಡಿರಲೇ ಇಲ್ಲ. ಹಲವರು ಬಾಯಾರಿಕೆಯಿಂದ ಕುಸಿದು ಬಿದ್ದಿದ್ದರು. ಶಾಸಕರು ಕೊಡುವ ಉಚಿತ ಉಡುಗೊರೆ ಏನು ಎನ್ನುವುದು ತಿಳಿಯದೆ ಜನರು ಭಾರೀ ನಿರೀಕ್ಷೆಯಿಂದ ಬಂದಿದ್ದರು. ಶಾಸಕರ ವೈಯಕ್ತಿಕ ಪ್ರಚಾರ ಪ್ರಿಯತೆಗೆ ಜನರನ್ನು ಬಲಿಪಶು ಮಾಡಲಾಯಿತು ಎಂದು ಆರೋಪಿಸಲಾಗುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಪುತ್ತೂರು ಕ್ಷೇತ್ರದ ಜನರ ಬಡತನದ ಚಿತ್ರವನ್ನು ರಾಜ್ಯದ ಮುಂದೆ ಆ ಸಮಾವೇಶ ತೆರೆದಿಟ್ಟಿತು. ಹಲವು ದಶಕಗಳಿಂದ ಕೋಮು ಶಕ್ತಿಗಳು ನಿಯಂತ್ರಿಸುತ್ತಾ ಬಂದಿರುವ ಪುತ್ತೂರು ತಾಲ್ಲೂಕಿನ ಜನರ ಸ್ಥಿತಿಗೆ ಶಾಸಕರ ತಟ್ಟೆ ಮತ್ತು ಟವೆಲ್ ಒಂದು ರೂಪಕದಂತಿದೆ. ಇಂತಹ ವ್ಯಕ್ತಿ ಕೇಂದ್ರಿತ ಕಾರ್ಯಕ್ರಮವನ್ನು ಉದ್ಘಾಟಿಸಲು ಮುಖ್ಯಮಂತ್ರಿಯನ್ನು ಕರೆತಂದಿರುವುದು ಇನ್ನೊಂದು ವಿಪರ್ಯಾಸವಾಗಿದೆ.

> **ಇಂತಹ ಸಂದರ್ಭದಲ್ಲಿ ಸರಕಾರದ ಈ ಗ್ಯಾರಂಟಿ ಯೋಜನೆಗಳ ಜೊತೆಗೆ ಬಲವಾಗಿ ನಿಂತರೆ ಅದುವೇ ತನ್ನ ಕ್ಷೇತ್ರದ ಜನರಿಗೆ ಶಾಸಕರು ನೀಡುವ ಬಹುದೊಡ್ಡ ಉಡುಗೊರೆಯಾಗಿರುತ್ತದೆ. ವಿಪರ್ಯಾಸವೆಂದರೆ ಕಾಂಗ್ರೆಸ್‌ನೊಳಗಿರುವ ಹಲವು ನಾಯಕರಿಗೆ ಈ ಗ್ಯಾರಂಟಿ ಯೋಜನೆಗಳು ಯಶಸ್ವಿಯಾಗುವುದು ಬೇಕಾಗಿಲ್ಲ. ಇತ್ತೀಚೆಗಷ್ಟೇ ಕಾಂಗ್ರೆಸ್‌ನ ಹಿರಿಯ ಮುಖಂಡರಾದ ಆರ್. ವಿ. ದೇಶಪಾಂಡೆ ಅವರು ನಾನು ಮುಖ್ಯಮಂತ್ರಿಯಾಗಿದ್ದರೆ ಗ್ಯಾರಂಟಿ ಯೋಜನೆ ಜಾರಿಗೊಳಿಸುತ್ತಿರಲಿಲ್ಲ ಎನ್ನುವ ಬೇಜವಾಬ್ದಾರಿ ಹೇಳಿಕೆಯನ್ನು ನೀಡಿದ್ದರು.**

ರಾಜ್ಯದಲ್ಲಿ ಹಲವು ಶಾಸಕರು ಇಂತಹ ಉಚಿತ ಉಡುಗೊರೆಗಳ ಗಿಮಿಕ್‌ಗಳನ್ನು ಮಾಡಿ ಜನರನ್ನು ಸೇರಿಸುತ್ತಿದ್ದಾರೆ. ಆದರೆ ಇದರಿಂದ ಜನರ ಬದುಕಿನಲ್ಲಿ ಯಾವುದೇ ಆಮೂಲಾಗ್ರ ಬದಲಾವಣೆಗಳಾಗುವುದಿಲ್ಲ. ಜನರಿಗೆ ನೂರು ರೂಪಾಯಿ ತಟ್ಟೆ, ಟವೆಲ್‌ಗಳನ್ನು ಕೊಡುವುದರಿಂದ ಅವರ ಯಾವ ಸಮಸ್ಯೆಗಳೂ ಇತ್ಯರ್ಥವಾಗುವುದಿಲ್ಲ. ಇದರ ಬದಲಿಗೆ ಈ ನಾಡಿನ ಜನರ ಆಮೂಲಾಗ್ರ ಅಭಿವೃದ್ಧಿಗಾಗಿ ತಮ್ಮದೇ ಸರಕಾರ ಹಮ್ಮಿಕೊಂಡಿರುವ ಗ್ಯಾರಂಟಿ ಯೋಜನೆಗಳನ್ನು ಮನೆ ಮನೆಗಳಿಗೆ ಪರಿಣಾಮಕಾರಿಯಾಗಿ ತಲುಪಿಸಿದರೆ ಕ್ಷೇತ್ರದ ಜನರ ಬದುಕೂ ಸಹನೀಯವಾಗುತ್ತದೆ. ಸರಕಾರಕ್ಕೂ ಹೆಸರು ಬರುತ್ತದೆ. ಭವಿಷ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೂ ಸಹಾಯವಾಗುತ್ತದೆ. ರಾಜ್ಯದ ಶಾಸಕರು ಹಮ್ಮಿಕೊಳ್ಳುವ 'ಉಚಿತ ಉಡುಗೊರೆ' ಕಾರ್ಯಕ್ರಮಗಳಿಂದ ಸರಕಾರಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಕೆಟ್ಟ ಹೆಸರು. ಲಾಭವಾದರೆ ಅದು ಶಾಸಕರಿಗೆ ವೈಯಕ್ತಿಕವಾಗಿ ಮಾತ್ರ. ತಟ್ಟೆ ಉಡುಗೊರೆ ಕೊಟ್ಟರೆ ಸಾಕೆ? ಆ ತಟ್ಟೆಗೆ ಬಡಿಸಲು ಅನ್ನವೂ ಬೇಕು. ಅಂತಹ ಅನ್ನ ಕೊಡುವ ಕೆಲಸವನ್ನು ಸರಕಾರದ ಗ್ಯಾರಂಟಿ ಯೋಜನೆಗಳೇ ರಾಜ್ಯಾದ್ಯಂತ ಅಭೂತಪೂರ್ವವಾಗಿ ಮಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ವಿರೋಧಗಳನ್ನು ಎದುರಿಸಿ ಗ್ಯಾರಂಟಿ ಯೋಜನೆಗಳನ್ನು ಜೀವಂತ ಇಡಲು ಸರಕಾರದೊಳಗೆ ಹೋರಾಟ ನಡೆಸುತ್ತಿದ್ದಾರೆ. ಅವರು ಈ ನಾಡಿನ ಮುಖ್ಯಮಂತ್ರಿಯಾಗಲು ಯಾಕೆ ಅರ್ಹರಲ್ಲ ಎನ್ನುವುದನ್ನು ಅವರ ಮಾತೇ ಹೇಳಿ ಬಿಟ್ಟಿತು. ವಿರೋಧ ಪಕ್ಷಗಳಿಗಂತೂ ಗ್ಯಾರಂಟಿ ಯೋಜನೆ ವಿಫಲವಾಗಬೇಕಾಗಿದೆ. ಯಾಕೆಂದರೆ, ಗ್ಯಾರಂಟಿ ಯೋಜನೆಗಳು ಐದು ವರ್ಷಗಳ ಕಾಲ ಯಶಸ್ವಿಯಾಗಿ ಜಾರಿಗೊಂಡರೆ ಅದು ಬಿಜೆಪಿಯ ಹಿಂದಿನ ಆಡಳಿತವನ್ನು ಜನರು ಪ್ರಶ್ನಿಸುವಂತೆ ಮಾಡುತ್ತದೆ. ಕಾಂಗ್ರೆಸ್ ಸರಕಾರಕ್ಕೆ ಸಾಧ್ಯವಾಗುವುದು ಬಿಜೆಪಿಗೆ ಯಾಕೆ ಸಾಧ್ಯವಾಗುವುದಿಲ್ಲ? ಎನ್ನುವ ಪ್ರಶ್ನೆ ಏಳುತ್ತದೆ. ಕಾಂಗ್ರೆಸ್‌ನೊಳಗಿರುವ ಕೆಲವು ನಾಯಕರಿಗೂ ಗ್ಯಾರಂಟಿ ಯೋಜನೆಗಳು ಯಶಸ್ವಿಯಾಗುವುದು ಬೇಕಾಗಿಲ್ಲ ಯಾಕೆಂದರೆ ದೊಡ್ಡ ಮಟ್ಟದ ಖಜಾನೆಯ ದುಡ್ಡು ಗ್ಯಾರಂಟಿ ಯೋಜನೆಗಳಿಗೆ ವ್ಯಯವಾಗುತ್ತಿರುವುದರಿಂದ, ವೈಯಕ್ತಿಕವಾಗಿ ದೋಚುವುದಕ್ಕೆ ಅವರಿಗೆ ಹಣ ಕೈಗೆ ಸಿಗುತ್ತಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಈ ಗ್ಯಾರಂಟಿ ಯೋಜನೆಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವರ್ಚಸ್ಸನ್ನು ಹೆಚ್ಚಿಸಿದೆ. ಗ್ರಾಮೀಣ ಪ್ರದೇಶದ ಮಹಿಳೆಯರು ಸಿದ್ದರಾಮಯ್ಯ ಅವರ ಅಭಿಮಾನಿಗಳಾಗಿ ಬದಲಾಗಿದ್ದಾರೆ. ಗ್ಯಾರಂಟಿ ಯೋಜನೆಗಳು ವಿಫಲವಾದರೆ ಮುಖ್ಯಮಂತ್ರಿಯ ವರ್ಚಸ್ಸೂ ಇಳಿಮುಖವಾಗುತ್ತದೆ. ಮುಖ್ಯಮಂತ್ರಿ ಹುದ್ದೆಗಾಗಿ ಸಿದ್ದರಾಮಯ್ಯ ಅವರ ಜೊತೆಗೆ ಒಳಗೊಳಗೆ ಸ್ಪರ್ಧೆಗಿಳಿದಿರುವ ಹಲವು ನಾಯಕರಿಗೆ ಈ ಕಾರಣಕ್ಕಾಗಿ ಗ್ಯಾರಂಟಿ ಯೋಜನೆ ವಿಫಲವಾಗಬೇಕಾಗಿದೆ.



## ರಾಮಾಯಣ

ರಾವಣನು ಸೀತಾದೇವಿಯ ಬಳಿಗೆ ಬಂದದ್ದು

• ಹಿಂದಿನ ಸಂಚಿಕೆಯಿಂದ

120 ನೆಯ ಅಧ್ಯಾಯ

ನಾನು ಶ್ರೀರಾಮನನ್ನು ಬಿಟ್ಟು ಒಂದು ಕ್ಷಣಮಾತ್ರವಾದರೂ ಲೋಕದಲ್ಲಿ ಶರೀರಸಹಿತ ನಿಲ್ಲುವವಳಲ್ಲ ಎಂದು ಆ ಅತ್ಯಂತ ಕರ್ಣಕಠೋರವಾದ ಮಾತುಗಳನ್ನು ನುಡಿದಳು. ಆ ಮಾತುಗಳನ್ನು ಕೇಳಿ ಲಕ್ಷ್ಮಣನ ಶರೀರವೆಲ್ಲವೂ ನಡುಗಲಾರಂಭಿಸಿತು. ಅವನು ಕೈ ಮುಗಿದುಕೊಂಡು ಎಲ್ ತಾಯಿ, ನೀನು ಹೇಳಿದ ಮಾತುಗಳಿಗೆ ನಾನು ಪ್ರತ್ಯುತ್ತರವನ್ನು ಕೊಡಲಾರೆನು. ನೀನು ನನ್ನ ಇಷ್ಟದೇವತಾಸ್ವರೂಪಳು. ಲೋಕದಲ್ಲಿ ಸ್ತ್ರೀಯರಿಗೆ ನಿಷ್ಠುರ ವಚನವು ಸ್ವಭಾವವಾಗಿರುವುದು. ಸ್ತ್ರೀಯರು ಚಂಚಲಬುದ್ಧಿಯಿಂದ ನಿಷ್ಠುರವಚನಗಳನ್ನು ನುಡಿದು ಧರ್ಮಾಧರ್ಮಗಳನ್ನು ವಿಚಾರಿಸದೆ ಅಣ್ಣತಮ್ಮಂದಿರಿಗೂ ತಂದೆ ಮಕ್ಕಳಿಗೂ ಭೇದವನ್ನು ಹುಟ್ಟಿಸುವುದು ಸ್ವಭಾವ! ದೇವಿ ನೀನು ನುಡಿಯುವ ಮಾತುಗಳು ನನ್ನ ಎರಡು ಕಿವಿಗಳಲ್ಲಿಯೂ ಕಬ್ಬಿಣದ ಸಲಾಕೆಗಳಂತೆ ಹೊಕ್ಕು ಮನಸ್ಸಿಗೆ ವ್ಯಥೆಯನ್ನುಂಟು ಮಾಡುತ್ತಿವೆ. ನಾನು ಇಂತಹ ದುರ್ವಾಕ್ಯಗಳನ್ನು ಸಹಿಸುವವನಲ್ಲ, ನೀನು ಹೇಳಿದ ಮಾತುಗಳನ್ನು ಈ ವನದಲ್ಲಿರುವ ವನದೇವತೆಗಳೂ ಋಷಿಗಳೂ ಕೇಳಿ ಸಾಕ್ಷಿಯಾಗಿರಲಿ. ನನ್ನನ್ನು ಈ ಪ್ರಕಾರವಾಗಿ ನಿಷ್ಠುರವಚನಗಳಿಂದ ನುಡಿಯುವ ನೀನು ಕೆಟ್ಟು ಹೋಗುವೆ. ನನ್ನ ಗುರುವಾದ ಶ್ರೀರಾಮನು ಹೇಳಿದಂತೆ ಆತನ ಆಜ್ಞೆಯನ್ನು ಪರಿಪಾಲಿಸಿಕೊಂಡಿರುವ ನನ್ನನ್ನು ನೀನು ನಿನ್ನ ಸ್ತ್ರೀಸ್ವಭಾವದಿಂದ ನಿಷ್ಠುರವಾಗಿ ನುಡಿದೆ. ನೀನು ಸುಖವಾಗಿರು. ನಾನು ಶ್ರೀರಾಮನ ಬಳಿಗೆ ಹೋಗುತ್ತೇನೆ. ನಿನ್ನನ್ನು ಇಲ್ಲಿರುವ ವನದೇವತೆಗಳು ರಕ್ಷಿಸಲಿ ನನಗೆ ದುರ್ನಿಮಿತ್ತಗಳು ಕಾಣುತ್ತಿವೆ. ನಾನು ತಿರುಗಿ ಬಂದು ಜಟಿ ಶ್ರೀರಾಮನೊಡನೆ ಕೂಡಿರುವುದನ್ನು ಕಾಣುವೆನೋ ಕಾಣೆನೋ ತಿಳಿಯದು. ಎಂದು ನುಡಿದನು. ಆ ಮಾತನ್ನು ಕೇಳಿ ಸೀತಾದೇವಿಯು ಕಣ್ಣೀರು ತುಂಬಿ ರೋದನಮಾಡುತ್ತ ಎಲೈ ಲಕ್ಷ್ಮಣ. ನಾನು ಶ್ರೀರಾಮನಿಲ್ಲದಿದ್ದರೆ ಗೋದಾವರೀನದಿಯಲ್ಲಾದರೂ ಪ್ರವೇಶಮಾಡುವೆನು. ಕೊರಳಿಗೆ ಹಗ್ಗವನ್ನಾದರೂ ಹಾಕಿಕೊಳ್ಳುವೆನು. ಅಲ್ಲದಿದ್ದರೆ ಅಗ್ನಿಯಲ್ಲಾದರೂ ಬೀಳುವೆನು. ವಿಷಪಾನವನ್ನಾದರೂ ಮಾಡಿ ಜೀವವನ್ನು ಬಿಡುವೆನಲ್ಲದೆ ಜೀವವಿಡಿದಿರಲಾರೆನು. ನಾನು ಶ್ರೀರಾಮನನ್ನಲ್ಲದೆ ಮತ್ತೊಬ್ಬ ಪುರುಷನನ್ನು ಪಾದದಿಂದಲಾದರೂ ಮುಟ್ಟುವವಳಲ್ಲ ಎಂದು ಅತಿಶೋಕದಿಂದ ನುಡಿದು ಕೈಗಳಿಂದ ಹೊಟ್ಟೆಯನ್ನು ಚಚ್ಚಿಕೊಳ್ಳುತ್ತ ಆತನು ಎಷ್ಟು ಸಂತವಿಟ್ಟರೂ ಒಂದು ಮಾತನ್ನಾದರೂ ನುಡಿಯದಿದ್ದಳು. ಅದನ್ನು ನೋಡಿ ಸತ್ಯಸಂಧನಾದ ಲಕ್ಷ್ಮಣನು ಬೇರೆ ದಾರಿಕಾಣದೆ ಸೀತಾದೇವಿಗೆ ಅಭಿವಂದಿಸಿ ಅವಳನ್ನು ತಿರುತಿರುಗಿ ನೋಡುತ್ತ ಶ್ರೀರಾಮನ ಸಮೀಪಕ್ಕೆ ಹೊರಟುಹೋದನು.ಈ ಪ್ರಕಾರದಲ್ಲಿ ಲಕ್ಷ್ಮಣನು ಶ್ರೀರಾಮನನ್ನು ನೋಡುವುದಕ್ಕಾಗಿ ವೇಗದಿಂದ ತೆರಳಿದನು. ಆ ಸಮಯದಲ್ಲಿ ರಾವಣನು ಕಾಷಾಯವಸ್ತ್ರಗಳನ್ನುಟ್ಟು ಶಿಖಾಯಜ್ಞೋಪವೀತಗಳುಳ್ಳವನಾಗಿ ಪಾದುಕೆಗಳನ್ನು ಮೆಟ್ಟಿ ಕೊಡೆಯನ್ನು ಹಿಡಿದು ಹೆಗಲಮೇಲೆ ಕಮಂಡಲುವನ್ನೂ ದಂಡವನ್ನೂ ಇಟ್ಟುಕೊಂಡು ಸಂನ್ಯಾಸಿವೇಷವನ್ನು ಧರಿಸಿದನು.

ಮುಂದುವರಿಯುವುದು...

# ಕನ್ನಡ ರಾಜ್ಯೋತ್ಸವ ಆಚರಿಸುವ ಬಗ್ಗೆ

ವಿಶ್ವಾಸ್.ಡಿ.ಗೌಡ





ಉದಯವಾಹಿನಿ, ವಿಶೇಷ

- ವರ್ಷಕ್ಕೊಮ್ಮೆ ಅಗತ್ಯವಾಗಿ ಅರ್ಥಪೂರ್ಣ ರಾಜ್ಯೋತ್ಸವ ನಡೆಯಿಸಿ. ಜೊತೆಗೆ, ವರ್ಷದುದ್ದಕ್ಕೂ ಕನ್ನಡಪರ ಕಾತ್ಯಕ್ರಮ ನಡೆಯಿಸಿ.
- ರಾಜ್ಯೋತ್ಸವಕ್ಕೆ ಹಣವನ್ನು ಒತ್ತಾಯದಿಂದ ವಸೂಲಿ ಮಾಡುವುದನ್ನು ವಿರೋಧಿಸಿ.
- ಕನ್ನಡಬಾವುಟ ಹಾರಿಸಿ, ತಳಿರುತೋರಣ ಕಟ್ಟಿ, ವಿದ್ಯುದ್ದೀಪ, ಧ್ವನಿವರ್ಧಕ ಹಾಕಿಸಿ ರಾಜ್ಯೋತ್ಸವ ಆಚರಿಸುವ ಬಯಕೆ ಇದ್ದಲ್ಲಿ ಆಚರಿಸಿ. ಆದರೆ, ದುಂದು ವೆಚ್ಚ ಬೇಡ.
- ಕನ್ನಡನಾಡಿನ ಬಗ್ಗೆ ಅಭಿಮಾನ ಮೂಡಿಸುವ ಹಾಡು ಗಳನ್ನು ಧ್ವನಿವರ್ಧಕಗಳಲ್ಲಿ ಹಾಕಿಸಿ.
- ಕನ್ನಡನಾಡಿನ ಬಗ್ಗೆ ಒಳ್ಳೆಯ ಉಪನ್ಯಾಸಗಳನ್ನು ಏರ್ಪಡಿಸಿ, ಕರ್ನಾಟಕದ ಚರಿತ್ರೆಯ, ಸಮಕಾಲೀನ ಸ್ಥಿತಿಯ ಪರಿಚಯ ಮಾಡಿಕೊಳ್ಳಿ.
- ನಿಮ್ಮ ಪ್ರದೇಶದಲ್ಲಿ ಕನ್ನಡ ಪುಸ್ತಕಗಳನ್ನು ಕೊಂಡೊಯ್ದು ಮನೆ ಮನೆಗೆ ಮಾರಿರಿ.
- ಕನ್ನಡ ವೃತ್ತಪತ್ರಿಕೆಗಳನ್ನು ತರಿಸಲು ಕೇಳಿಕೊಳ್ಳಿ.
- ನಿಮ್ಮ ಪ್ರದೇಶದ ನಾಮಫಲಕಗಳು ಕನ್ನಡದಲ್ಲಿರುವಂತೆ ಒತ್ತಾಯಿಸಿ.
- ಕರ್ನಾಟಕದ ಸಮಸ್ಯೆಗಳನ್ನು ವಿವರಿಸುವ ಕರಪತ್ರಗಳನ್ನು ಹಂಚಿ.
- ಮಂಟಪಗಳಿಗೆ, ವೇದಿಕೆಗಳಿಗೆ ಹಿರಿಯ ಕನ್ನಡಿಗರ ಹೆಸರು ಗಳನ್ನಿಡಿ.
- ನವೆಂಬರ್ ತಿಂಗಳಲ್ಲಿ ಹಂಪೆ, ಬನವಾಸಿಯಂತಹ ಜಾಗ ಗಳಿಗೆ ಪ್ರವಾಸ ಏರ್ಪಡಿಸಿ,
- ಕನ್ನಡಕ್ಕಾಗಿ ದುಡಿದಿರುವ ಮಹನೀಯರನ್ನು ಕರೆದು ಗೌರವಿಸಿ.
- ಕನ್ನಡಕ್ಕಾಗಿ ದುಡಿಯುತ್ತೇನೆ, ಬದುಕುತ್ತೇನೆ ಎಂಬ ದೀಕ್ಷೆಯನ್ನು ತೊಡಿ.

**ಕನ್ನಡ ಬಳಸಿ; ಕನ್ನಡ ಉಳಿಸಿ :** ಏಕೀಕರಣವಾಗಿ 50 ವರ್ಷಗಳು ಕಳೆದರೂ ಕನ್ನಡವು ರಾಜ್ಯದ ಸಾರ್ವಭೌಮಭಾಷೆ ಆಗಿಲ್ಲದಿರುವುದು, ಕನ್ನಡಿಗ 'ಸ್ಥಳೀಯ ನಿರಾಶ್ರಿತ'ನಾಗಿದ್ದಾನೆಂಬುದು ವಿಷಾದನೀಯ. ಇದಕ್ಕೆ ನಮ್ಮನ್ನಾಳುವವರ 'ಇಚ್ಛಾಶಕ್ತಿ'ಯ ಕೊರತೆಯೇ ಕಾರಣ ಎನ್ನುವುದು ಸತ್ಯವಾದರೂ, ಇದರಾಚೆಗೆ ಕನ್ನಡಿಗರು ತಮ್ಮ ನಾಡು-ನುಡಿಗಳ ಬಗ್ಗೆ ಅಗತ್ಯ ಗಮನ ನೀಡುತ್ತಿಲ್ಲ ಎಂಬ ಮಾತೂ ಇದೆ. ಪ್ರತಿಯೊಬ್ಬರಿಗೂ ತಮ್ಮ ತಾಯಿ ನುಡಿಯ ಬಗ್ಗೆ ಪ್ರೀತಿ ಇರುತ್ತದೆ. ಅದರ ಉತ್ಕರ್ಷಕ್ಕೆ ಏನು ಮಾಡ ಬೇಕು ಎಂಬುದರ ಬಗ್ಗೆ ಸ್ಪಷ್ಟತೆಯಿರುವುದಿಲ್ಲ. ' ಒಡೆದು ಕಾಣುವ ಬದಲಾವಣೆಗಳು ಭೋರ್ಗರೆವ ಜಲಪಾತದಿಂದಲೇ ಆಗಬೇಕೆಂದಿಲ್ಲ. ಜಿನುಗುವ ಮಳೆ ಕೂಡ ಅಂತರ್ಜಲದ ಪಾತಳಿ ಹೆಚ್ಚಿಸಬಹುದು; ನೆಲದಾಯಿಗೆ ಹಸಿರು ಉಡುಪು ತೊಡಿಸಬಹುದು' ಎನ್ನುವ ಚಂದ್ರಶೇಖರ ಪಾಟೀಲರ ಮಾತು ನಮಗೆ ಅನುಸರಣೀಯ ಆಗಬೇಕು. ನಾವು ಕೆಲವು ದಿನಗಳು ಪ್ರಯತ್ನಪೂರ್ವಕವಾಗಿ ಕನ್ನಡ ಬಳಸುವ, 'ಕನ್ನಡ-ಕನ್ನಡಿಗ- ಕರ್ನಾಟಕ'ಗಳ ಬಗ್ಗೆ ಚಿಂತಿಸುವ ರೂಢಿ ಮಾಡಿಕೊಂಡರೆ, ಕನ್ನಡವು ನಮ್ಮ ಬದುಕಿನ ಭಾಗವಾಗುವಂತಾದರೆ 'ಕನ್ನಡದ ಆತಂಕಗಳು ನಿವಾರಣೆಯಾಗುತ್ತವೆ.



# ಹಲ್ಲು ಒಸಡಿಗೆ ಮನೆಮದ್ದು

ಇತ್ತೀಚಿನ ದಿನಗಳಲ್ಲಿ, ಹಲ್ಲಿನ, ಒಸಡಿನ ಸಮಸ್ಯೆಗಳಿಗೆ ಹಲವು ರೀತಿಯ ಟೂತ್‌ಪೇಸ್ಟ್‌ಗಳು ಅಥವಾ ವೈದ್ಯರು ಶಿಫಾರಸ್ಸು ಮಾಡಿರುವ ಕ್ರೀಮ್‌ಗಳು ಲಭ್ಯವಿದೆ. ಆದರೆ ಹಿಂದಿನ ಕಾಲದಲ್ಲಿ ಹಲ್ಲಿನ ಹಾಗೂ ಒಸಡಿನ ಸಮಸ್ಯೆಗಳಿಗೆಲ್ಲಾ ಅನೇಕ ಮನೆಮದ್ದುಗಳನ್ನು ಶಿಫಾರಸು ಮಾಡಲಾಗುತ್ತಿತ್ತು, ಇವುಗಳನ್ನು ಇಂದಿಗೂ ಅಷ್ಟೇ ಪರಿಣಾಮಕಾರಿ ಎಂದು ಪರಿಗಣಿಸಲಾಗಿದೆ. ದೈಹಿಕ ಆರೋಗ್ಯ ಕಾಪಾಡಿಕೊಳ್ಳುವುದರ ಜೊತೆಗೆ ಮೌಖಿಕ ಆರೋಗ್ಯ ಅಂದರೆ ಬಾಯಿಯ ಆರೋಗ್ಯವ ಕೂಡ ಅಷ್ಟೇ ಮುಖ್ಯವಾಗಿರುತ್ತದೆ. ಅದರಲ್ಲೂ ಬಾಯಿಯೊಳಗಿನ ಹಲ್ಲುಗಳು ಹಾಗೂ ವಸಡುಗಳ ಆರೋಗ್ಯದ ಕಡೆಗೆ ಅಷ್ಟೇ ಪ್ರಾಮುಖ್ಯತೆಯನ್ನು ನೀಡಬೇಕಾಗುತ್ತದೆ. ಕೆಲವೊಮ್ಮೆ ಅಪೌಷ್ಟಿಕರ ಆಹಾರ ಸೇವನೆಯ ಕಾರಣಗಳಿಂದಾಗಿ ದೇಹದಲ್ಲಿನ ವಿಟಮಿನ್ಸ್ , ಕ್ಯಾಲ್ಸಿಯಂ, ಪೊಟ್ಯಾಶಿಯಂ ಮುಂತಾದ ಪ್ರಮುಖ ಖನಿಜಾಂಶಗಳ ಹಾಗೂ ಪೌಷ್ಟಿಕಾಂಶ ಗಳ ಕೊರತೆ ಕಾಣಿಸಿಕೊಳ್ಳುತ್ತದೆ, ಇದರ ಜೊತೆಗೆ ಸರಿಯಾಗಿ ಬಾಯಿಯ ಸ್ವಚ್ಛತೆ ಮಾಡದಿರುವುದು, ಅತಿಯಾದ ಕಾಫಿ-ಟೀ ಕುಡಿಯುವ ಅಭ್ಯಾಸ, ಅತಿಯಾದ ತಂಬಾಕು ಸೇವನೆ, ಹೀಗೆ ಹಲವಾರು ಕಾರಣಗಳಿಂದಾಗಿ ಬಾಯಿ ಆರೋಗ್ಯವು ಹದಗೆಡುತ್ತಿವೆ.

**ಹಲ್ಲು ಒಸಡುಗಳನ್ನು ಆರೋಗ್ಯವಾಗಿಡಲು ಮನೆಮದ್ದುಗಳು:** ಇತ್ತೀಚಿನ ದಿನಗಳಲ್ಲಿ, ಹಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ವಿವಿಧ ಟೂತ್‌ಪೇಸ್ಟ್‌ಗಳನ್ನು ಬಳಸಲಾಗುತ್ತದೆ. ಆದಾಗ್ಯೂ, ಹಿಂದಿನ ಕಾಲದಲ್ಲಿ, ಹಲ್ಲಿನ ಸಮಸ್ಯೆಗಳಿಗೆ ಅನೇಕ ಮನೆಮದ್ದುಗಳನ್ನು ಶಿಫಾರಸು ಮಾಡಲಾಗುತ್ತಿತ್ತು, ಇವುಗಳನ್ನು ಇಂದಿಗೂ ಅಷ್ಟೇ ಪರಿಣಾಮಕಾರಿ ಎಂದು ಪರಿಗಣಿಸಲಾಗುತ್ತಿದೆ. ನೈಸರ್ಗಿಕವಾಗಿಸಿಗುವ ಇಂತಹ ಮನೆಮದ್ದುಗಳು, ಹಲ್ಲಿನ ಕುಳಿಗಳು, ಹಲ್ಲುನೋವು ಮತ್ತು ದುರ್ಬಲ ಒಸಡುಗಳಂತಹ ಸಮಸ್ಯೆಗಳಿಗೆ ವಿಶೇಷವಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಾ ಬರುತ್ತಿವೆ. ಪ್ರಸ್ತುತ ಇಂದಿನ ಲೇಖನದಲ್ಲಿ ಹಲ್ಲು ಮತ್ತು ಒಸಡುಗಳನ್ನು ಆರೋಗ್ಯ ವಾಗಿಡಲು ಪರಿಣಾಮಕಾರಿ ಮಾರ್ಗಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಂಡಿದ್ದೇವೆ ಅದಕ್ಕೂ ಮುನ್ನ ನೆನಪಿಡಬೇಕಾದ ಸಂಗತಿ ಏನೆಂದ್ರೆ, ದೀರ್ಘಕಾಲದಿಂದ ವಸಡಿನ ಹಾಗೂ ಹಲ್ಲಿನ ಸಮಸ್ಯೆಗಳಿದ್ದರೆ ಆರಂಭದಲ್ಲಿಯೇ ದಂತ ವೈದ್ಯರ ಹತ್ತಿರ ತಪಾಸಣೆ ನಡೆಸಿ ಗುಣಪಡಿಸಿಕೊಳ್ಳಬೇಕು. ಇಲ್ಲವಾದರೆ ಬಾಯಿಯಲ್ಲಿ ಸೋಂಕಿನ ಸಮಸ್ಯೆ ಕಾಣಿಸಿಕೊಂಡು ಹಲ್ಲುಗಳ ತಳದ ಮೂಳೆಗಳ ಮೇಲೆ ಪರಿಣಾಮ ಬೀರುತ್ತದೆ.

> **ಉಪ್ಪು ನೀರು**
>
> **ಉಪ್ಪು ನೀರು ನೈಸರ್ಗಿಕ ಸೋಂಕುನಿವಾರಕವಾಗಿ ಕಾರ್ಯ ನಿರ್ವಹಿ ಸುತ್ತದೆ. ಇದು ಬಾಯಿಯಲ್ಲಿರುವ ಬ್ಯಾಕ್ಟೀರಿಯಾಗಳನ್ನು ಕೊಲ್ಲಲು ಸಹಾಯ ಮಾಡುತ್ತದೆ ಮತ್ತು ನೋವಿನಿಂದ ಪರಿಹಾರ ನೀಡುತ್ತದೆ. ಆದ್ದರಿಂದ, ಒಂದು ಲೋಟ ಉಗುರು ಬೆಚ್ಚಗಿನ ನೀರಿಗೆ ಅರ್ಧ ಟೀ ಚಮಚ ಉಪ್ಪನ್ನು ಸೇರಿಸಿ ಮತ್ತು ದಿನಕ್ಕೆ ಎರಡರಿಂದ ಮೂರು ಬಾರಿ ಬಾಯಿ ಮುಕ್ಕಳಿಸುವುದರಿಂದ ಹಲ್ಲು ಕುಳಿಗಳಿಂದ ಪರಿಹಾರ ದೊರೆಯುವುದಲ್ಲದೆ, ಒಸಡುಗಳ ಉರಿಯೂತವೂ ಕಡಿಮೆಯಾಗುತ್ತದೆ.**

**ಲವಂಗದ ಬಳಕೆ :** ಲವಂಗವನ್ನು ಹಲ್ಲುನೋವು ಮತ್ತು ಹಲ್ಲುಕುಳಿಗಳಿಗೆ ಬಹಳ ಹಿಂದಿನಿಂದಲೂ ಬಳಸಲಾಗುವ ಮನೆಮದ್ದು ಎಂದು ಪರಿಗಣಿಸ ಲಾಗುತ್ತದೆ. ಅವುಗಳ ಉರಿಯೂತ ನಿವಾರಕ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಲಕ್ಷಣಗಳು ನೋವು ಊತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಪ್ರತಿದಿನ ಮೂರರಿಂದ ನಾಲ್ಕು ಲವಂಗಗಳಲ್ಲಿ ಒಂದು ದೊಡ್ಡ ಲೋಟ ನೀರಿನಲ್ಲಿ ಸರಿಯಾಗಿ ಕುದಿಸಿಕೊಂಡು ಡಿಕಾಕ್ಷನ್ ತಯಾರಿಸಿಕೊಂಡು ಕುಡಿಯುವ ಅಭ್ಯಾಸ ಮಾಡಿಕೊಳ್ಳಿ. ಪ್ರಮುಖವಾಗಿ ಈ ಪುಟ್ಟ ಲವಂಗದಲ್ಲಿ ಕಂಡುಬರುವ ಕ್ಯಾಲ್ಸಿಯಂ ಮೆಗ್ನೀಷಿಯಂ ಅಂಶವು ನಮ್ಮ ಹಲ್ಲುಗಳನ್ನು ಹಾಗೂ ವಸಡುಗಳನ್ನು ಆರೋಗ್ಯದಿಂದ ಕೂಡಿರುವ ಹಾಗೆ ಮಾಡುವುದರ ಜೊತೆಗೆ, ಮುಂದಿನ ದಿನಗಳಲ್ಲಿ ಹಲ್ಲುಗಳ ಮೇಲಿನ ಎನಾಮಲ್ ಕೂಡ ಹಾಳಾಗದಂತೆ ನೋಡಿಕೊಳ್ಳುತ್ತದೆ. ಇಲ್ಲಾಂದ್ರೆ ಲವಂಗದ ಎಣ್ಣೆಗೆ ಒಂದು ಹತ್ತಿಯ ಉಂಡೆಯನ್ನು ಅದ್ದಿ ನೋವಿರುವ ವಸಡು ಅಥವಾ ಹಲ್ಲುಗಳ ಜಾಗಕ್ಕೆ ನಿಧಾನವಾಗಿ ಸವರಿ ಇಲ್ಲಾಂದ್ರೆ ಸ್ವಲ್ಪ ಹೊತ್ತು ಹತ್ತಿ ಉಂಡೆಯನ್ನು ಅದೇ ಜಾಗದಲ್ಲಿ ಇರುವ ಹಾಗೆ ನೋಡಿಕೊಳ್ಳಿ.



**ಅರಿಶಿನ ಮತ್ತು ಸಾಸಿವೆ ಎಣ್ಣೆ :** ಅರಿಶಿನವು ಉರಿಯೂತ ನಿವಾರಕ ಮತ್ತು ನಂಜುನಿರೋಧಕ ಗುಣಗಳನ್ನು ಹೊಂದಿದೆ, ಆದರೆ ಸಾಸಿವೆ ಎಣ್ಣೆ ಹಲ್ಲುಗಳನ್ನು ಬಲಪಡಿಸುತ್ತದೆ. ಪೇಸ್ಟ್ ಮಾಡಲು, ಅರ್ಧ ಟೀಚಮಚ ಅರಿಶಿನವನ್ನು ಕೆಲವು ಹನಿ ಸಾಸಿವೆ ಎಣ್ಣೆ ಮತ್ತು 1 ಚಿಟಿಕೆ ಉಪ್ಪಿನೊಂದಿಗೆ ಬೆರೆಸಿ. ಈ ಪೇಸ್ಟ್ ಅನ್ನು ನಿಮ್ಮ ಹಲ್ಲು ಒಸಡುಗಳ ಮೇಲೆ ನಿಧಾನವಾಗಿ ಮಸಾಜ್ ಮಾಡಿ. 5 ರಿಂದ 10 ನಿಮಿಷಗಳ ನಂತರ ಚೆನ್ನಾಗಿ ತೊಳೆಯಿರಿ. ಈ ಪರಿಹಾರವು ಹಲ್ಲುಕುಳಿಗಳು, ಒಸಡು ಉರಿಯೂತ ಮತ್ತು ನೋವನ್ನು ಗುಣಪಡಿಸಲು ಸಹಾಯ ಮಾಡುತ್ತದೆ.

# ಶುಗರ್ ಇರುವವರು ಸಿಹಿಗೆಣಸು ತಿನ್ನಬಹುದೇ?

ಸಿಹಿ ಗೆಣಸು ರುಚಿಯಲ್ಲಿ ಸಿಹಿಯಾಗಿರುವುದರಿಂದ ಮಧುಮೇಹಿಗಳು ಇದನ್ನು ತಿನ್ನಲೇ ಬಾರದು ಎನ್ನಲಾಗುತ್ತದೆ. ಆದರೆ ಇದು ಎಷ್ಟರ ಮಟ್ಟಿಗೆ ನಿಜ.

ನಿಜಕ್ಕೂ ಸಿಹಿಗೆಣಸು ತಿಂದ್ರೆ ಶುಗರ್ ಹೆಚ್ಚಾಗುತ್ತಾ ವೈದ್ಯರಿಂದಲೇ ತಿಳಿಯೋಣ. ಸಿಹಿ ಗೆಣಸು ಸಾಕಷ್ಟು ಪೌಷ್ಟಿಕಾಂಶಗಳನ್ನು ಹೊಂದಿದ್ದು ಇದೊಂದು ಆರೋಗ್ಯಕರ ತಿನಿಸಾಗಿದೆ. ಆದರೆ ಇದು ಮಧುಮೇಹಿಗಳಿಗೆ ಉತ್ತಮವೇ, ಸಕ್ಕರೆಕಾಯಿಲೆ ಇರುವವರು ಸಿಹಿಗೆಣಸನ್ನು ಸೇವಿಸಬಹುದೇ ಎನ್ನುವ ಗೊಂದಲ ಹಲವರಲ್ಲಿದೆ. ಆದರೆ ಸಿಹಿಗೆಣಸು ಮಧುಮೇಹಿಗಳಿಗೂ ಉತ್ತಮ ಸ್ನಾಕ್ಸ್ ಆಗಿದೆ ಎಂದು ಇನ್‌ಸ್ಟಾಗ್ರಾಮ್‌ನ ವಿಡಿಯೋವೊಂದರಲ್ಲಿ ಹೇಳಲಾಗಿದೆ. ಇದು ಸತ್ಯವೋ ಸುಳ್ಳೋ ಎನ್ನುವುದನ್ನು ತಿಳಿಯೋಣ.

**ವಿಡಿಯೋದಲ್ಲಿ ಏನಿದೆ:** fithub.academy ಎನ್ನುವ ಇನ್‌ಸ್ಟಾಗ್ರಾಮ್‌ನ ವಿಡಿಯೋವೊಂದರಲ್ಲಿ ಸಿಹಿಗೆಣಸಿನ ಸೇವನೆ ಮಧುಮೇಹಿಗಳಿಗೆ ಉತ್ತಮ. ಇದರಿಂದ ಶುಗರ್ ಹೆಚ್ಚಾಗುವುದಿಲ್ಲ ಎಂದು ಹೇಳಲಾಗಿದೆ.



ಸಾಮಾನ್ಯ ಆಲೂಗಡ್ಡೆಗೆ ಹೋಲಿಸಿದರೆ ಸಿಹಿಗೆಣಸಿನಲ್ಲಿ ಕಡಿಮೆ ಗ್ಲೈಸಮಿಕ್ ಇಂಡಕ್ಸ್ ಇದೆ. ಇದರಲ್ಲಿರುವ ಫೈಬರ್ ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ನಿಯಂತ್ರಿಸುತ್ತದೆ, ಜೀರ್ಣಕ್ರಿಯೆಯನ್ನು ಉತ್ತಮವಾಗಿಸುತ್ತದೆ. ಮಧುಮೇಹಿಗಳು ತಾವು ಸೇವಿಸುವ ಪ್ರಮಾಣದ ಬಗ್ಗೆ ಗಮನಹರಿಸಬೇಕು. ಸ್ವಲ್ಪ ಪ್ರಮಾಣದ ಸೇವನೆ ಮಧುಮೇಹಿಗಳಿಗೆ ಒಳ್ಳೆಯದು ಎನ್ನಲಾಗಿದೆ.

> **ಫ್ಯಾಕ್ಟ್ ಚೆಕ್ ತೀರ್ಮಾನ**
>
> **ಸಜಗ್ ಫ್ಯಾಕ್ಟ್ ಚೆಕ್‌ನಲ್ಲಿ ಮಧುಮೇಹಿಗಳು ಸಿಹಿಗೆಣಸನ್ನು ಸೇವಿಸಬಹುದು. ಆದರೆ ಸೇವಿಸುವಾಗ ಕಡಿಮೆ ಪ್ರಮಾಣದಲ್ಲಿ ಸೇವಿಸಬೇಕು ಎಂದು ಹೇಳಿದ್ದಾರೆ. ಇದರಿಂದ ಯಾವುದೇ ರೀತಿಯ ಹಾನಿಯಾಗುವುದಿಲ್ಲ ಎಂದು ತಿಳಿದು ಬಂದಿದೆ.**

**ವೈದ್ಯರು ಏನಂತಾರೆ:**
ವಿಡಿಯೋದಲ್ಲಿ ತಿಳಿಸಲಾಗಿರುವ ಮಾಹಿತಿಯು ಎಷ್ಟರ ಮಟ್ಟಿಗೆ ನಿಜ ಎನ್ನುವುದನ್ನು ತಿಳಿಯಲು ಫ್ಯಾಕ್ಟ್ ಚೆಕ್ ತಂಡವು ವೈದ್ಯರ ಅಭಿಪ್ರಾಯವನ್ನು ಪಡೆದಿದೆ.

ಬೆಂಗಳೂರಿನಲ್ಲಿನ ದಿ ಬೆಂಗಳೂರು ಆಸ್ಪತ್ರೆಯ ಮಧುಮೇಹ ತಜ್ಞ ಡಾ. ಶಂಕರ್ ಅವರ ಪ್ರಕಾರ, ಮಧುಮೇಹಿಗಳು ಸ್ವಲ್ಪ ಪ್ರಮಾಣದಲ್ಲಿ ಸಿಹಿಗೆಣಸನ್ನು ಸೇವಿಸಬಹುದು. ಅಪರೂಪಕ್ಕೆ ಸೇವಿಸುವುದರಿಂದ ಶುಗರ್ ಲೆವೆಲ್ ಹೆಚ್ಚಾಗುವುದಿಲ್ಲ. ಈ ವಿಡಿಯೋದಲ್ಲಿ ತಿಳಿಸಿದರುವ ಮಾಹಿತಿ ನಿಜ ಎಂದಿದ್ದಾರೆ.

# ಕಾಗಿನೆಲೆ ಅಭಿವೃದ್ಧಿಗೆ 34 ಕೋಟಿ ರೂ. ಮೊತ್ತದ ಕ್ರಿಯಾ ಯೋಜನೆಗೆ ಮಂಜೂರಾತಿ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ 13ನೇ ಸಭೆಯಲ್ಲಿ ಒಟ್ಟು 34 ಕೋಟಿ ಮೊತ್ತದ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡಲಾಯಿತು. ಕಾಗಿನೆಲೆಯಲ್ಲಿ ಪ್ರತಿ ವರ್ಷ ಕನಕ ಉತ್ಸವವನ್ನು ಆಚರಿಸಲು ಕ್ರಮ ಕೈಗೊಳ್ಳಲಾಗುವುದು. ಉತ್ಸವ ಸಂದರ್ಭದಲ್ಲಿ ಜಿಲ್ಲೆಯ ದಾರ್ಶನಿಕರ ಜೀವನಾದರ್ಶಗಳನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಸೂಚಿಸಿದರು.



ಉದಯವಾಹಿನಿ ಚಿತ್ರ

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕನಕ ಅಧ್ಯಯನ ಪೀಠ ಸಮನ್ವಯದಿಂದ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು ಎಂದು ಸಭೆಯಲ್ಲಿ ಸೂಚಿಸಲಾಯಿತು. ಪ್ರಾಧಿಕಾರದಲ್ಲಿ ಸಂಚಿತ ನಿಧಿಯನ್ನು ಸ್ಥಾಪಿಸಿ ಕಾರ್ಯಕ್ರಮಗಳನ್ನು ನಿರಂತರವಾಗಿ ಕೈಗೊಳ್ಳಲು ಕ್ರಮ ಕೈಗೊಳ್ಳಬೇಕು. ಪ್ರಾಧಿಕಾರದ ಆದಾಯ ಹೆಚ್ಚಳಕ್ಕೆ ಯೋಜನೆಗಳನ್ನು ರೂಪಿಸಬೇಕು ಎಂದು ಸೂಚನೆ ನೀಡಿದರು. ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕನಕದಾಸರ ಕರ್ಮಭೂಮಿ ಕಾಗಿನೆಲೆ ಮತ್ತು ಜನ್ಮಭೂಮಿ ಸ್ಥಳವಾದ ಬಾಡ ಗ್ರಾಮ ಹಾಗೂ ಸುತ್ತಮುತ್ತಲಿನ ಪರಂಪರೆಯ ತಾಣಗಳನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಗೊಳಿಸುವ ಬಗ್ಗೆ ವಿವಿಧ ಯೋಜನೆಗಳ ಕ್ರಿಯಾ ಯೋಜನೆ ಅನುಮೋದನೆಗೆ ಸಲ್ಲಿಸಲಾಯಿತು. ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಲಾಭವನ ನಿರ್ಮಾಣ, ಕನಕ ವಸ್ತು ಸಂಗ್ರಹಾಲಯದಲ್ಲಿ ಒಳವಸ್ತು ಶಿಲ್ಪ ಸಂಗ್ರಹಾಲಯ ನಿರ್ಮಾಣ, ಚೆನ್ನಕೇಶವ ದೇವಾಲಯ, ಮೆಟ್ಟಿಲು ಮತ್ತು ಗೋಪುರ, ಕಮಾನುಗಳ ನಿರ್ಮಾಣ, ಕದರಮಂಡಲಗಿ ವೆಂಕಟೇಶ್ವರ ದೇವಸ್ಥಾನ, ಸಮುದಾಯ ಭವನ ನಿರ್ಮಾಣ ಮಾಡಲು ತೀರ್ಮಾನಿಸಲಾಯಿತು.

ಪ್ರಾಧಿಕಾರದ ವ್ಯಾಪ್ತಿಯ ಉದ್ಯಾನಗಳ ವಾರ್ಷಿಕ ನಿರ್ವಹಣೆ ಗುತ್ತಿಗೆ ನೀಡುವ ಕುರಿತು ಹಾಗೂ ಕನಕ ಪರಿಸರ ಉದ್ಯಾನದಲ್ಲಿ ಖಾಲಿ ಇರುವ ಜಾಗದಲ್ಲಿ ಬಟಾನಿಕಲ್ ಗಾರ್ಡನ್ ನಿರ್ಮಿಸಲು ನಿರ್ಧರಿಸಲಾಯಿತು. ಕಾಗಿನೆಲೆ ಗ್ರಾಮದ ವ್ಯಾಪ್ತಿಯಲ್ಲಿ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರ ಕೈಗೊಳ್ಳಲು ಚರ್ಚಿಸಲಾಯಿತು. ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್, ಸಚಿವ ಶಿವಾನಂದ ಪಾಟೀಲ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ, ಪ್ರಾಧಿಕಾರದ ಅಧಿಕಾರಿಗಳು ಉಪಸ್ಥಿತರಿದ್ದರು.

# ಹೋಟೆಲ್ ರುಚಿಯ ಮಶ್ರೂಮ್ ಪರೋಟ ಮನೆಯಲ್ಲೇ ಮಾಡಿ...

ತೂಕ ಇಳಿಸುವ ಪರೋಟ! ಸಾಮಾನ್ಯ ಪರೋಟ ಬಿಡಿ, ಈ ಪೌಷ್ಟಿಕಾಂಶ ಭರಿತ ಮಶ್ರೂಮ್ ಪರೋಟ ಮಾಡಿ ನೋಡಿ. ಇದು ಕಡಿಮೆ ಕ್ಯಾಲೋರಿ, ಹೆಚ್ಚು ಪ್ರೋಟೀನ್ ಮತ್ತು ಫೈಬರ್ ಹೊಂದಿದೆ. ಹೌದು, ತೂಕ ಇಳಿಸಿಕೊಳ್ಳಲು ಬಯಸುವವರಿಗೆ ಮಶ್ರೂಮ್ ಪರೋಟ ಒಂದು ಅತ್ಯುತ್ತಮ ಹಾಗೂ ಆರೋಗ್ಯಕರ ಉಪಹಾರವಾಗಿದೆ. ಕಡಿಮೆ ಎಣ್ಣೆ, ಹೆಚ್ಚಿನ ಪ್ರೋಟೀನ್ ಮತ್ತು ನಾರಿನಾಂಶದಿಂದ ಕೂಡಿರುವ ಈ ಪರೋಟ ದಿನವಿಡೀ ನಿಮ್ಮನ್ನು ಚೈತನ್ಯದಿಂದ ಇರಿಸುತ್ತದೆ. ಇದನ್ನು ಬೆಳಗಿನ ಉಪಾಹಾರ ಅಥವಾ ಊಟದಲ್ಲಿ ಸೇವಿಸಬಹುದು.

ನೀವು ತೂಕ ಇಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ ಮತ್ತು ಆಹಾರದ ರುಚಿಯೊಂದಿಗೆ ರಾಜಿ ಮಾಡಿಕೊಳ್ಳಲು ಬಯಸದಿದ್ದರೆ, ಮಶ್ರೂಮ್ ಪರೋಟ ಉತ್ತಮ ಆಯ್ಕೆಯಾಗಿದೆ. ಇದನ್ನು ಕಡಿಮೆ ಎಣ್ಣೆಯಲ್ಲಿ ತಯಾರಿಸಲಾಗುತ್ತದೆ. ಅಲ್ಲದೆ, ಇದು ಫೈಬರ್ ಮತ್ತು ಪ್ರೋಟೀನ್ ಸಮೃದ್ಧವಾಗಿರುವುದರಿಂದ ದೀರ್ಘಕಾಲದವರೆಗೆ ಹೊಟ್ಟೆ ತುಂಬಿದ ಭಾವನೆ ನೀಡುತ್ತದೆ. ಬನ್ನಿ, ಈ ರುಚಿಕರ ಮತ್ತು ಆರೋಗ್ಯಕರ ಮಶ್ರೂಮ್ ಪರಾಠಾವನ್ನು ತಯಾರಿಸುವುದು ಹೇಗೆ ಎಂದು ತಿಳಿಯೋಣ.

**ಮಶ್ರೂಮ್ ಪರೋಟ ತಯಾರಿಸುವ ವಿಧಾನ -** ಮೊದಲು ಪರೋಟದ ಹೂರಣವನ್ನು ತಯಾರಿಸಿ. ಒಂದು ಪ್ಯಾನ್‌ನಲ್ಲಿ ಚಮಚ ಎಣ್ಣೆ ಹಾಕಿ ಅದಕ್ಕೆ ಈರುಳ್ಳಿ, ಹಸಿಮೆಣಸು ಮತ್ತು ಶುಂಠಿ ಬೆಳ್ಳುಳ್ಳಿ ಪೇಸ್ಟ್ ಸೇರಿಸಿ. ಬಳಿಕ ತಿಳಿ ಗೋಲ್ಡನ್ ಬಣ್ಣ ಬರುವವರೆಗೆ ಹುರಿಯಿರಿ. ನಂತರ ಹೆಚ್ಚಿದ ಮಶ್ರೂಮ್ ಹಾಕಿ. ಅದರ ನೀರು ಒಣಗುವವರೆಗೆ 4 ರಿಂದ 5 ನಿಮಿಷ ಹುರಿಯಿರಿ. ಈಗ ಇದಕ್ಕೆ ಉಪ್ಪು, ಕಾಳುಮೆಣಸು, ಜೀರಿಗೆ ಪುಡಿ ಮತ್ತು ಕೊತ್ತಂಬರಿ ಸೊಪ್ಪು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. ಹೂರಣವನ್ನು ತಣ್ಣಗಾಗಲು ಬಿಡಿ. ಬಳಿಕ ಪರಾಠಾಕ್ಕಾಗಿ ಹಿಟ್ಟು ತಯಾರಿಸಿ. ಗೋಧಿ ಹಿಟ್ಟಿಗೆ ಸ್ವಲ್ಪ ಉಪ್ಪು ಮತ್ತು ಓಟ್ಸ್ ಪುಡಿ ಸೇರಿಸಿ ಕಲಸಿ. ಹಿಟ್ಟನ್ನು ಮೃದುಗೊಳಿಸಲು ಸ್ವಲ್ಪ ಮೊಸರು ಸೇರಿಸಬಹುದು.



ಈಗ ಕಲಸಿದ ಹಿಟ್ಟಿನಿಂದ ಸಣ್ಣ ಉಂಡೆಗಳನ್ನು ಮಾಡಿ, ಲಟ್ಟಿಸಿ, ಅದರ ಮಧ್ಯದಲ್ಲಿ ಮಶ್ರೂಮ್ ಹೂರಣ ಇಟ್ಟು, ನಾಲ್ಕು ಕಡೆಯಿಂದ ಮುಚ್ಚಿ ನಿಧಾನವಾಗಿ ಪರೋಟವನ್ನು ಲಟ್ಟಿಸಿ.

ಇದಾದ ಬಳಿಕ ನಾನ್ ಸ್ಟಿಕ್ ತವಾ ಮೇಲೆ ಸ್ವಲ್ಪ ಆಲಿವ್ ಎಣ್ಣೆ ಅಥವಾ ದೇಸಿ ತುಪ್ಪ ಹಚ್ಚಿ, ಪರೋಟವನ್ನು ಎರಡೂ ಕಡೆ ಬೇಯಿಸಿ. ತೂಕ ಇಳಿಕೆಗೆ ಕೆಲವು ಸಲಹೆಗಳು ಪರೋಟ ಹುರಿಯಲು ಕನಿಷ್ಠ ಪ್ರಮಾಣದ ಎಣ್ಣೆಯನ್ನು ಬಳಸಿ. ಇದನ್ನು ಹಸಿರು ಚಟ್ನಿ ಅಥವಾ ಕಡಿಮೆ ಕೊಬ್ಬಿನ ಮೊಸರಿನೊಂದಿಗೆ ಸೇವಿಸಿ. ಬೆಳಗಿನ ಉಪಾಹಾರದಲ್ಲಿ ಇದನ್ನು ಸೇವಿಸುವುದರಿಂದ ದಿನವಿಡೀ ಶಕ್ತಿ ದೊರೆಯುತ್ತದೆ ಮತ್ತು ಅತಿಯಾಗಿ ತಿನ್ನುವುದನ್ನು ತಡೆಯುತ್ತದೆ. ಮಶ್ರೂಮ್ ಪರೋಟ ಒಂದು ಉತ್ತಮ ತೂಕ ಇಳಿಕೆ ಪರಾಠಾ ರೆಸಿಪಿಯಾಗಿದೆ. ಇದರಲ್ಲಿರುವ ಪ್ರೋಟೀನ್ ಮತ್ತು ಫೈಬರ್ ನಿಮ್ಮ ಚಯಾಪಚಯವನ್ನು ಹೆಚ್ಚಿಸಿ, ತೂಕ ಇಳಿಸಲು ಸಹಾಯ ಮಾಡುತ್ತದೆ. ಇದನ್ನು ನಿಮ್ಮ ದಿನ ನಿತ್ಯದ ಆಹಾರದಲ್ಲಿ ಸೇರಿಸಿಕೊಳ್ಳಿ.

**ಮಶ್ರೂಮ್ ಪರೋಟ ತಯಾರಿಸಲು ಬೇಕಾಗುವ ಸಾಮಗ್ರಿಗಳು**

- ಗೋಧಿ ಹಿಟ್ಟು - 1 ಕಪ್
- ಮಶ್ರೂಮ್ - 1 ಕಪ್ (ಸಣ್ಣಗೆ ಹೆಚ್ಚಿದ)
- ಈರುಳ್ಳಿ - 1
- ಹಸಿಮೆಣಸು - 1
- ಶುಂಠಿ - ಬೆಳ್ಳುಳ್ಳಿ ಪೇಸ್ಟ್ - 1 ಚಮಚ
- ಕೊತ್ತಂಬರಿ ಸೊಪ್ಪು - 2 ಸ್ಪೂನ್
- ಉಪ್ಪು - ರುಚಿಗೆ ತಕ್ಕಷ್ಟು
- ಕಾಳುಮೆಣಸಿನ ಪುಡಿ - ¼ ಚಮಚ
- ಜೀರಿಗೆ ಪುಡಿ - ¼ ಚಮಚ
- ಓಟ್ಸ್ ಪುಡಿ ಅಥವಾ ಕಡಲೆ ಹಿಟ್ಟು - 1 ಸ್ಪೂನ್
- ಆಲಿವ್ ಎಣ್ಣೆ ಅಥವಾ ದೇಸಿ ತುಪ್ಪ - 1 ಚಮಚ

ರಫೇಲ್ ಹತ್ತಿದ ದ್ರೌಪದಿ ಮುರ್ಮು; ರಾಷ್ಟ್ರಪತಿಯನ್ನು ಆಗಸಕ್ಕೆ ಕೊಂಡೊಯ್ದ ಮಹಿಳಾ ಪೈಲಟ್ ಯಾರು?

# ಎರಡನೇ ಬಾರಿಗೆ ಯುದ್ಧ ವಿಮಾನ ಹತ್ತಿದ್ದ ಹೆಗ್ಗಳಿಕೆ ಪಾತ್ರರಾದ ಮುರ್ಮು



**ಭಾರತ ಖಡಕ್ ಉತ್ತರ**

**ಹರಿಯಾಣ:** ರಾಷ್ಟ್ರಪತಿ ದ್ರೌಪದಿ ಮುರ್ಮು ಹರಿಯಾಣದ ಅಂಬಾಲದಲ್ಲಿನ ವಾಯುನೆಲೆಯಿಂದ ರಫೇಲ್ ಜೆಟ್‌ನಲ್ಲಿ ಹಾರಾಟ ನಡೆಸುವ ಮೂಲಕ ರಫೇಲ್ ಯುದ್ಧ ವಿಮಾನ ಹತ್ತಿದ ಭಾರತದ ಮೊದಲ ರಾಷ್ಟ್ರಪತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ. ರಫೇಲ್ ಜೆಟ್‌ನಲ್ಲಿ ಹಾರಾಟ ನಡೆಸುವ ಮುನ್ನ ಜೆಟ್ ಸ್ಯೂಟ್ ಧರಿಸಿದ್ದ ಮುರ್ಮು ಕೈಯಲ್ಲಿ ಹೆಲ್ಮೆಟ್ ಹಿಡಿದು, ಕನ್ನಡಕವನ್ನು ಧರಿಸಿ ಕ್ಯಾಮೆರಾಗಳ ಮುಂದೆ ಪೋಸ್ ನೀಡಿ, ನಂತರ ಜೆಟ್‌ನಲ್ಲಿ ಒಳಗೆ ಕುಳಿತುಕೊಂಡು ಕೈಬೀಸಿ ಹಾರಾಟ ನಡೆಸುವುದಕ್ಕೆ ಮುನ್ಸೂಚನೆಯನ್ನು ನೀಡಿದ್ದರು.

**ಎರಡನೇ ಬಾರಿಗೆ ಯುದ್ಧ ವಿಮಾನವನ್ನು ಹತ್ತಿದ ಮುರ್ಮು:** ಅಂದಹಾಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಯುದ್ಧ ವಿಮಾನ ಹತ್ತುತ್ತಿರುವುದು ಇದೇ ಮೊದಲೇನಲ್ಲ. 2023ರ ಏಪ್ರಿಲ್ 28 ರಂದು ಅಸ್ಸಾಂನ ತೇಜ್ಪುರ ವಾಯುನೆಲೆಯಿಂದ ಮೊದಲ ಬಾರಿಗೆ ಸುಖೋಯ್-30 ಎಂಕೆಐ ಯುದ್ಧ ವಿಮಾನವನ್ನು ಹತ್ತಿದ್ದರು. ಈ ಮೂಲಕ ಯುದ್ಧವಿಮಾನ ಹತ್ತಿದ ಮೂರನೇಯ ಭಾರತದ ರಾಷ್ಟ್ರಪತಿಯಾಗಿದ್ದಾರೆ. ಇನ್ನು, ಕೇವಲ ಮುರ್ಮು ಮಾತ್ರವಲ್ಲದೇ ಭಾರತದ ಮಾಜಿ ರಾಷ್ಟ್ರಪತಿಗಳಾದ ಎ.ಪಿ.ಜೆ ಅಬ್ದುಲ್ ಕಲಾಂ ಹಾಗೂ ಭಾರತದ ಮೊದಲ ರಾಷ್ಟ್ರಪತಿಯಾಗಿರುವ ಪ್ರತಿಭಾ ಪಾಟೀಲ್ ಸಹ ಈ ಮೊದಲು ಯುದ್ಧ ವಿಮಾನಗಳಲ್ಲಿ ಹಾರಾಟ ನಡೆಸಿದ್ದಾರೆ. 2006ರಲ್ಲಿ ಮೊದಲ ಬಾರಿಗೆ ಎ.ಪಿ.ಜೆ ಅಬ್ದುಲ್ ಕಲಾಂ ಅವರು ಪುಣೆ ಬಳಿಯ ವಾಯುನೆಲೆಯಿಂದ ಸುಖೋಯ್-30 ಎಂಕೆಐ ಫೈಟರ್ ಜೆಟ್‌ನಲ್ಲಿ ಹಾರಾಟ ನಡೆಸಿದ್ದರು. ಅನಂತರ 2009ರಲ್ಲಿ ಪ್ರತಿಭಾ ಪಾಟೀಲ್ ಸಹ ಅದೇ ವಾಯುನೆಲೆಯಿಂದ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ್ದರು. ಇನ್ನು, ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಿರುವ ಮುರ್ಮು ಸಹ ಯುದ್ಧ ವಿಮಾನದಲ್ಲಿ ಎರಡೆರಡು ಬಾರಿ ಪ್ರಯಾಣ ಬೆಳೆಸುವ ಮೂಲಕ ಭಾರತದ ಫೈಟರ್ ಜೆಟ್‌ಗಳು ಹಾಗೂ ವಾಯುಪಡೆಗಳ ಬಲವನ್ನು ಪ್ರದರ್ಶಿಸುವಂತಿದೆ.

**ಮುರ್ಮು ಜೊತೆಗೆ ನಿಂತಿರುವ ಮಹಿಳಾ ಪೈಲಟ್ ಯಾರು?** ಇನ್ನು, ರಾಷ್ಟ್ರಪತಿ ಮುರ್ಮು ಜೊತೆಗೆ ರಫೇಲ್ ಜೆಟ್ ನಲ್ಲಿ ಪಾಕಿಸ್ತಾನ ಆಪರೇಷನ್ ಸಿಂಧೂರದ ಸಮಯದಲ್ಲಿ ತಾನು ಸೆರೆ ಹಿಡಿದಿರುವುದಾಗಿ ಹೇಳಿಕೊಂಡಿತ್ತು. ಈ ಕುರಿತು ಪಾಕಿಸ್ತಾನ ಮಾಧ್ಯಮಗಳು ಆಪರೇಷನ್ ಸಿಂಧೂರದ ಸಮಯದಲ್ಲಿ ಸ್ಕ್ವಾಡ್ರನ್ ಲೀಡರ್ ಶಿವಾಂಗಿ ಸಿಂಗ್ ಅವರ ಜೆಟ್ ಅನ್ನು ಹೊಡೆದುರುಳಿಸಿ, ಅವರನ್ನು ಸೆರೆ ಹಿಡಿಯಲಾಗಿದೆ ಎಂದು ವರದಿ ಮಾಡಿದ್ದವು. ಆದರೆ ಅದಕ್ಕೆ ಭಾರತ ಈಗ ರಾಷ್ಟ್ರಪತಿ ಮುರ್ಮು ಜೊತೆಗೆ ಅವರನ್ನು ನಿಲ್ಲಿಸಿದ್ದು, ಶಿವಾಂಗಿ ನಗು ಮುಖದಿಂದ ನಿಂತಿರುವುದು ಪಾಕ್‌ನ ಎಲ್ಲಾ ಸುಳ್ಳು ಹೇಳಿಕೆಗಳಿಗೆ ಭಾರತ ಖಡಕ್ ಉತ್ತರ ನೀಡಿದಂತಿದೆ.

**2020ರಲ್ಲಿ ಭಾರತಕ್ಕೆ ಬಂದ ಫ್ರೆಂಚ್‌ನ ರಫೇಲ್ ಜೆಟ್**

ರಫೇಲ್ ಫ್ರೆಂಚ್‌ನ ಡಸಾಲ್ಟ್ ಏವಿಯೇಶನ್ ಕಂಪನಿಯು ನಿರ್ಮಿಸಿದ ಡಬಲ್ ಎಂಜಿನ್ ಹೊಂದಿದ ಬಹುಮುಖ ಯುದ್ಧ ವಿಮಾನವಾಗಿದೆ. ಅತ್ಯಾಧುನಿಕ ರೆಡಾರ್, ನಿಖರವಾದ ಆಯುಧ ವ್ಯವಸ್ಥೆ ಮತ್ತು ಚುರುಕು ಕಾರ್ಯಕ್ಷಮತೆಯಿಂದ ಪ್ರಸಿದ್ಧಿಯಾದ ಈ ಯುದ್ಧ ವಿಮಾನವನ್ನು ಭಾರತೀಯ ವಾಯುಪಡೆಯು 2020ರಲ್ಲಿ ರಫೇಲ್ ಯುದ್ಧ ವಿಮಾನಗಳನ್ನು ಸೇರ್ಪಡೆಗೊಳಿಸಿದ್ದು, ಇದು ಭಾರತದ ವಾಯುಪಡೆಗೆ ಹೊಸ ಶಕ್ತಿ ತುಂಬಿದೆ. ಇನ್ನು, ವಿಶೇಷವೆಂದರೆ ಪಹಲ್ಗಾಮ್ ದಾಳಿ ನಂತರ ರಫೇಲ್ ಯುದ್ಧ ವಿಮಾನವನ್ನು ಬಳಸಿಕೊಂಡು ಪಾಕಿಸ್ತಾನಕ್ಕೆ ಚಳ್ಳೆ ಹಣ್ಣು ತಿನ್ನಿಸಿತ್ತು. ಈಗ ಅದೇ ರಫೇಲ್ ಜೆಟ್ ನಲ್ಲಿ ಹಾರುವ ಮೂಲಕ ರಾಷ್ಟ್ರಪತಿ ಮುರ್ಮು ಇತಿಹಾಸ ಸೃಷ್ಟಿಸಿದ್ದಾರೆ.

## ಅಫ್ಘಾನ್ ಭಾರತದ ಕೈಗೊಂಬೆಯಂತಿದೆ, ಶಾಂತಿ ಮಾತುಕತೆ ವಿಫಲವಾಗಲು ಭಾರತವೇ ಕಾರಣ

**ಇಸ್ಲಮಾಬಾದ್:** ಟರ್ಕಿಯ ರಾಜಧಾನಿ ಇಸ್ತಾಂಬುಲ್‌ನಲ್ಲಿ ನಡೆದ ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನದ ನಡುವಿನ ಕದನ ವಿರಾಮದ ಮಾತುಕತೆ ವಿಫಲವಾದ ಬೆನ್ನಲ್ಲೇ ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸೀಫ್ ಅಫ್ಘಾನಿಸ್ತಾನದ ಮೇಲೆ 50 ಪಟ್ಟು ಹೆಚ್ಚಾಗಿ ದಾಳಿ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡುವ ಜೊತೆಗೆ ಅಫ್ಘಾನಿಸ್ತಾನ ಭಾರತದ ಕೈಗೊಂಬೆಯಂತೆ ವರ್ತಿಸುತ್ತಿದೆ ಎಂದು ಟೀಕೆ ಮಾಡಿದ್ದಾರೆ.

**ಅಫ್ಘಾನಿಸ್ತಾನಕ್ಕೆ 50ಪಟ್ಟು ಹೆಚ್ಚಿನ ದಾಳಿ ಎಚ್ಚರಿಕೆ ನೀಡಿದ ಪಾಕ್:** ಟರ್ಕಿಯಲ್ಲಿ ನಡೆದ ಶಾಂತಿ ಮಾತುಕತೆ ವಿಫಲವಾದ ಬೆನ್ನಲ್ಲೇ ಪಾಕಿಸ್ತಾನದ ಮಾಧ್ಯಮಗಳೊಂದಿಗೆ ಮಾತನಾಡಿದ ಖವಾಜಾ ಆಸೀಫ್ ಅಫ್ಘಾನಿಸ್ತಾನ ಭಾರತದ ಪ್ರತಿನಿಧಿಯಂತೆ ವರ್ತಿಸುತ್ತಿದೆ, ಒಂದು ವೇಳೆ ಮತ್ತೆ ಅಫ್ಘಾನ್ ಪಾಕಿಸ್ತಾನದ ಮೇಲೆ ಆಕ್ರಮಣ ನಡೆಸಲು ಮುಂದಾದರೇ ನಾವು ಅದರ ಮೇಲೆ 50ಪಟ್ಟು ಹೆಚ್ಚಿನ ದಾಳಿಯನ್ನು ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದೆ. ಅಫ್ಘಾನಿಸ್ತಾನ ಭಾರತದ ಕೈಯಲ್ಲಿನ ಗೊಂಬೆಯಂತೆ ಆಡುತ್ತಿದೆ ಎಂದು ಆರೋಪಿಸಿರುವ ಖವಾಜಾ ಆಸೀಫ್ ಮೇ ತಿಂಗಳಿನಲ್ಲಿ ನಡೆದ ಯುದ್ಧದಲ್ಲಿ ಭಾರತ ಅನುಭವಿಸಿದ ಸೋಲಿನ ಪ್ರತಿಕಾರವನ್ನು ತೀರಿಸಿಕೊಳ್ಳಲು ಭಾರತ ಅಫ್ಘಾನಿಸ್ತಾನವನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡು ಪಾಕಿಸ್ತಾನದ ಮೇಲೆ ಯುದ್ಧ ಮಾಡುತ್ತಿದೆ ಎಂದು ಹೇಳಿದ್ದಾರೆ.

**ಶಾಂತಿ ಮಾತುಕತೆ ವಿಫಲಗೊಳ್ಳಲು ಭಾರತವೇ ಕಾರಣ ಎಂದ ಖವಾಜಾ ಆಸೀಫ್** ಅಲ್ಲದೇ ಪಾಕ್-ಅಫ್ಘಾನ್ ನಡುವಿನ ಶಾಂತಿ ಮಾತುಕತೆಯ ಬಗ್ಗೆ ಮಾತನಾಡಿದ ಆಸೀಫ್ ನಾವು ಒಪ್ಪಂದ ಮಾಡಿಕೊಳ್ಳಲು ಇನ್ನೇನೂ ಹತ್ತಿರವಿದ್ದು, ಅಫ್ಘಾನಿಸ್ತಾನಕ್ಕೆ ಇದರ ಕುರಿತು ವರದಿ ಮಾಡುವ ಪ್ರತಿ ಬಾರಿ ಭಾರತದ ಹಸ್ತಕ್ಷೇಪದಿಂದ ನಾವು ಒಪ್ಪಂದ ಹಿಂತೆಗೆದುಕೊಳ್ಳುವಂತೆ ಮಾಡುತ್ತಿದ್ದಾರೆ ಎಂದು ಭಾರತದ ವಿರುದ್ಧ ಆರೋಪಿಸಿದ್ದಾರೆ.



**ಪಾಕ್ ಆರೋಪಕ್ಕೆ ಭಾರತ ತಿರುಗೇಟು:** ಈ ಹಿಂದೆಯೂ ಪಾಕ್-ಅಫ್ಘಾನ್ ನಡುವಿನ ಸಂಘರ್ಷಕ್ಕೆ ಭಾರತವೇ ಕಾರಣ ಎಂದು ಆರೋಪಿಸಿದ್ದ ಪಾಕ್, ಅಫ್ಘಾನ್ ಭಾರತದ ಪರ ಪ್ರಾಕ್ಸಿ ವಾರ್ ನಡೆಸುತ್ತಿದೆ ಎಂದು ಹೇಳಿತ್ತು. ಇದಕ್ಕೆ ಭಾರತದ ವಿದೇಶಾಂಗ ಸಚಿವಾಲಯ ತಿರುಗೇಟು ನೀಡಿ ಪಾಕಿಸ್ತಾನ ಭಯೋತ್ಪಾದಕರಿಗೆ ಆಶ್ರಯ ನೀಡುತ್ತಿದೆ ಎಂದು ಎಲ್ಲರಿಗೂ ಗೊತ್ತಿರುವ ವಿಷಯ, ಅಲ್ಲದೇ ತನ್ನ ಆಂತರಿಕ ವಿಷಯಗಳಿಗೆ ನೆರೆಹೊರೆಯವರನ್ನು ಹೊಣೆ ಮಾಡುವುದು ಪಾಕಿಸ್ತಾನಕ್ಕಿರುವ ಹಳೆಯ ಚಾಳಿ ಎಂದು ಕಟುವಾಗಿ ಟೀಕಿಸಿತ್ತು.

# ಪ್ರಧಾನಿ ನರೇಂದ್ರ ಮೋದಿ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ

## ಮತಗಳಿಗಾಗಿ ಮೋದಿ ಜೀ ವೇದಿಕೆ ಮೇಲೂ ಕುಣಿಯುತ್ತಾರೆ: ನಾಲಿಗೆ ಹರಿಬಿಟ್ಟ ರಾಹುಲ್ ಗಾಂಧಿ

**ಹೊಸದಿಲ್ಲಿ:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬಿಹಾರ ವಿಧಾನಸಭಾ ಚುನಾವಣಾ ಪ್ರಚಾರವನ್ನು ಭರ್ಜರಿಯಾಗಿ ಆರಂಭಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಅವರು, ಪ್ರಧಾಮೋದಿ ಅವರು ಚುನಾವಣೆ ಗೆಲ್ಲಲು ಏನನ್ನ ಬೇಕಾದರೂ ಮಾಡುತ್ತಾರೆ ಎಂದು ಆರೋಪಿಸಿದರು. ಮುಜಾಫರ್‌ಪುರದಲ್ಲಿ ನಡೆದ ಜಂಟಿ ರ್‍ಯಾಲಿಯಲ್ಲಿ ಮಾತನಾಡಿದ ರಾಹುಲ್ ಗಾಂಧಿ, ನೀವು ನರೇಂದ್ರ ಮೋದಿಯವರನ್ನು ನಿಮ್ಮ ಮತಗಳಿಗಾಗಿ ಕುಣಿಯಲು ಹೇಳಿದರೆ, ಅವರು ವೇದಿಕೆ ಮೇಲೆ ಕುಣಿಯುತ್ತಾರೆ ಎಂದು ಲೇವಡಿ ಮಾಡಿದರು. ಈ ರ್‍ಯಾಲಿಯಲ್ಲಿ ಆರ್‌ಜೆಡಿ ನಾಯಕ, ಮಹಾಘಟ ಬಂಧನದ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್ ಕೂಡ ಉಪಸ್ಥಿತರಿದ್ದರು.

**ಮೋದಿ, ನಿತೀಶ್ ಕುಮಾರ್ ವಿರುದ್ಧ ವಾಗ್ದಾಳಿ:** ಚುನಾವಣೆಗೆ ಕೇವಲ ಒಂದು ವಾರ ಬಾಕಿ ಇರುವಾಗ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಪ್ರಧಾನಿ ಮೋದಿ, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ವಿರುದ್ಧ ಯಾವುದೇ ಹಿಂಜರಿಕೆ ಇಲ್ಲದೆ ವಾಗ್ದಾಳಿ ನಡೆಸಿದರು. ಬಿಹಾರದ ಅತಿ ದೊಡ್ಡ ಹಬ್ಬವಾದ ಛತ್ ಪೂಜೆಯನ್ನು ಉಲ್ಲೇಖಿಸಿ, ದೆಹಲಿಯಲ್ಲಿ ಮಾಲಿನ್ಯಗೊಂಡ ಯಮುನಾ ನದಿಯಲ್ಲಿ ಭಕ್ತರು ಪೂಜೆ ಮಾಡುತ್ತಿದ್ದಾಗ, ಪ್ರಧಾನಿ ಅವರು ವಿಶೇಷವಾಗಿ ನಿರ್ಮಿಸಿದ ಕೊಳದಲ್ಲಿ ಸ್ನಾನ ಮಾಡಿದರು ಎಂದು ರಾಹುಲ್ ಗಾಂಧಿ ವ್ಯಂಗ್ಯವಾಡಿದರು. ನರೇಂದ್ರ ಮೋದಿ ತಮ್ಮ ಈಜುಕೊಳದಲ್ಲಿ ಸ್ನಾನ ಮಾಡಲು ಹೋದರು. ಯಮುನಾ ನದಿಯೊಂದಿಗೆ ಅವರಿಗೆ ಯಾವುದೇ ಸಂಬಂಧವಿಲ್ಲ. ಛತ್ ಪೂಜೆಯೊಂದಿಗೆ ಅವರಿಗೆ ಯಾವುದೇ ಸಂಬಂಧವಿಲ್ಲ. ಅವರಿಗೆ ಬೇಕಾಗಿರುವುದು ನಿಮ್ಮ ಮತ ಮಾತ್ರ ಎಂದು ಗಾಂಧಿ ಹೇಳಿದರು. ಕಳೆದ 20 ವರ್ಷಗಳಿಂದ ಬಿಹಾರದ ಅಧಿಕಾರದಲ್ಲಿದ್ದರೂ ಹಿಂದುಳಿದ ವರ್ಗಗಳಿಗಾಗಿ ಏನನ್ನೂ ಮಾಡಿಲ್ಲ ಎಂದು ನಿತೀಶ್ ಕುಮಾರ್ ಅವರನ್ನು ರಾಹುಲ್ ಗಾಂಧಿ ತರಾಟೆಗೆ ತೆಗೆದುಕೊಂಡರು. ಅಲ್ಲದೆ, ರಾಜ್ಯವನ್ನು ನಿಯಂತ್ರಿಸಲು ಬಿಜೆಪಿ ಜೆಡಿಯು ನಾಯಕನ ಚಿತ್ರವನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು.

> ಪ್ರಧಾನಿ ಮೋದಿ ಅವರ ಆರ್ಥಿಕ ನೀತಿಗಳ ಬಗ್ಗೆ ಟೀಕಿಸಿದ ಅವರು, ಬಿಜೆಪಿ ಸರ್ಕಾರವು ನೋಟು ಅಮಾನ್ಯೀಕರಣ, ಜಿಎಸ್‌ಟಿ.ಯಿಂದ ಸಣ್ಣ ವ್ಯಾಪಾರಗಳನ್ನು ನಾಶಪಡಿಸಿದೆ ಎಂದು ಆರೋಪಿಸಿದರು. ನಿಮ್ಮ ಫೋನ್‌ನ ಹಿಂಭಾಗದಲ್ಲಿ ಏನು ಬರೆದಿದೆ ಎಂದು ನನಗೆ ಹೇಳಿ? ಎಂದು ಅವರು ಜನರನ್ನು ಕೇಳಿದರು. ಮೇಡ್ ಇನ್ ಚೀನಾ ಎಂದು ಬರೆದಿದೆ. ನಾವು ಮೇಡ್ ಇನ್ ಚೀನಾ ಇರಬಾರದು, ಅದು ಮೇಡ್ ಇನ್ ಬಿಹಾರ ಆಗಿರಬೇಕು ಎಂದು ಹೇಳುತ್ತೇವೆ. ಮೊಬೈಲ್‌ಗಳು, ಶರ್ಟ್‌ಗಳು, ಪ್ಯಾಂಟ್‌ಗಳು - ಎಲ್ಲವೂ ಬಿಹಾರದಲ್ಲಿ ತಯಾರಾಗಬೇಕು, ಇದರಿಂದ ಯುವಕರಿಗೆ ಉದ್ಯೋಗ ಸಿಗುತ್ತದೆ.
>
> – ರಾಹುಲ್ ಗಾಂಧಿ, ಕೈ ನಾಯಕ

**ರಾಹುಲ್ ಗಾಂಧಿ ಆರೋಪ**

ಬಿಹಾರದಲ್ಲಿ ನಡೆದ ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಸುಮಾರು 66 ಲಕ್ಷ ಹೆಸರುಗಳನ್ನು ಅಳಿಸಿ ಹಾಕಿದ್ದನ್ನು ಪ್ರಸ್ತಾಪಿಸಿದ ಅವರು, ಮತದಾರರಿಗೆ ಮಹಾಘಟ ಬಂಧನಕ್ಕೆ ಬೆಂಬಲ ನೀಡುವಂತೆ ಮನವಿ ಮಾಡಿದರು. ಅವರು ಬಿಹಾರದಲ್ಲಿ ಬಿಹಾರದ ಧ್ವನಿಯುಳ್ಳ ಸರ್ಕಾರ ರಚನೆಯಾಗದಂತೆ ತಮ್ಮ ಅತ್ಯುತ್ತಮ ಪ್ರಯತ್ನ ಮಾಡುತ್ತಾರೆ. ಇದುವೇ 'SIR' ಅರ್ಥ. ಆದರೆ ನಾವು ನಿಮಗೆ ಖಾತರಿ ನೀಡುತ್ತೇವೆ, ನಾವು ಬಿಹಾರದಲ್ಲಿ ಪ್ರತಿ ವರ್ಗ, ಪ್ರತಿ ಜಾತಿ, ಪ್ರತಿ ಧರ್ಮದ ಸರ್ಕಾರವನ್ನು ರಚಿಸುತ್ತೇವೆ. ನಾವು ಯಾರನ್ನೂ ಹಿಂದೆ ಬಿಡುವುದಿಲ್ಲ.

**ರಿಮೋಟ್ ಕಂಟ್ರೋಲ್ ಬಿಜೆಪಿಯ ಕೈಯಲ್ಲಿದೆ:** ನಿತೀಶ್ ಜಿ ಅವರ ಮುಖವನ್ನು ಬಳಸಿಕೊಳ್ಳಲಾಗುತ್ತಿದೆ. ರಿಮೋಟ್ ಕಂಟ್ರೋಲ್ ಬಿಜೆಪಿಯ ಕೈಯಲ್ಲಿದೆ. ಅತ್ಯಂತ ಹಿಂದುಳಿದ ಜನರ ಧ್ವನಿ ಅಲ್ಲಿ ಕೇಳುತ್ತದೆ ಎಂದು ನೀವು ಅಂದುಕೊಳ್ಳಬಾರದು. ಬಿಜೆಪಿ ಅವರ ಕೈಯಲ್ಲಿ ರಿಮೋಟ್ ಕಂಟ್ರೋಲ್ ಇದೆ, ಮತ್ತು ಅವರಿಗೆ ಸಾಮಾಜಿಕ ನ್ಯಾಯದೊಂದಿಗೆ ಯಾವುದೇ ಸಂಬಂಧವಿಲ್ಲ ಎಂದರು. ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ರಾಹುಲ್ ಗಾಂಧಿ, ತಮ್ಮ ಮತ ಕಳ್ಳತನ ಆರೋಪವನ್ನು ಪುನರುಚ್ಚರಿಸಿದರು. ಬಿಹಾರದಲ್ಲೂ ಇದೇ ರೀತಿಯ ಪ್ರಯತ್ನ ನಡೆಯಬಹುದು ಎಂದು ಎಚ್ಚರಿಸಿದರು. ಅವರು ನಿಮ್ಮ ಮತಗಳನ್ನು ಕದಿಯುವಲ್ಲಿ ನಿರತರಾಗಿದ್ದಾರೆ. ಅವರು ಮಹಾರಾಷ್ಟ್ರದಲ್ಲಿ ಚುನಾವಣೆಗಳನ್ನು ಕದ್ದರು, ಹರಿಯಾಣದಲ್ಲಿ ಚುನಾವಣೆಗಳನ್ನು ಕದ್ದರು, ಬಿಹಾರದಲ್ಲೂ ಅವರು ತಮ್ಮ ಅತ್ಯುತ್ತಮ ಪ್ರಯತ್ನ ಮಾಡುತ್ತಾರೆ ಎಂದು ಗಾಂಧಿ ಆರೋಪಿಸಿದರು.

243 ಸದಸ್ಯರ ಬಿಹಾರ ವಿಧಾನಸಭೆಗೆ ನವೆಂಬರ್ 6 ಮತ್ತು ನವೆಂಬರ್ 11 ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ. ಮತ ಎಣಿಕೆ ನವೆಂಬರ್ 14 ರಂದು ನಡೆಯಲಿದೆ.



# ರಿಯೊ ಡಿ ಜನೈರೊದಲ್ಲಿ ರಕ್ತದೋಕುಳಿ



**4 ಪೊಲೀಸರೂ ಸೇರಿ 64 ಮಂದಿ ಬಲಿ**

**ರಿಯೊ ಡಿ ಜನೈರೊ:** ಬ್ರೆಜಿಲ್‌ನ ರಿಯೊ ಡಿ ಜನೈರೊದಲ್ಲಿ ಕುಖ್ಯಾತ ಕೊಮಾಂಡೊ ವರ್ಮೆಲ್ಹೊ ಗ್ಯಾಂಗ್ ಅನ್ನು ಗುರಿಯಾಗಿಸಿಕೊಂಡು ನಡೆಸಿದ ಬೃಹತ್ ಪೊಲೀಸ್ ಕಾರ್ಯಾಚರಣೆಯಲ್ಲಿ ನಾಲ್ವರು ಪೊಲೀಸ್ ಅಧಿಕಾರಿಗಳು ಸೇರಿದಂತೆ ಕನಿಷ್ಠ 64 ಜನರು ಮೃತಪಟ್ಟಿದ್ದಾರೆ.

ನಗರದ ಇತಿಹಾಸದಲ್ಲಿ ನಡೆದ ಅತ್ಯಂತ ಭೀಕರ ದಾಳಿ ಇದಾಗಿದ್ದು, ವಿಶ್ವಸಂಸ್ಥೆಯ ಹವಾಮಾನ ಶೃಂಗಸಭೆಗೆ ಸಂಬಂಧಿಸಿದಂತೆ ಪ್ರಮುಖ ಜಾಗತಿಕ ಕಾರ್ಯಕ್ರಮಗಳಿಗೆ ರಿಯೊ ಆತಿಥ್ಯ ವಹಿಸುವ ಕೆಲವೇ ದಿನಗಳ ಮೊದಲು ಈ ಘಟನೆ ನಡೆದಿದೆ.

ಸುಮಾರು 2,500 ಭದ್ರತಾ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ನಗರದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವಿರುವ ಅಲೆಮಾವೊ, ಪೆನ್ಹಾ ಕೊಳೆಗೇರಿ ಪ್ರದೇಶಗಳಲ್ಲಿ ಮಾದಕವಸ್ತು ಕಳ್ಳಸಾಗಣೆ ಜಾಲವನ್ನು ಮಟ್ಟ ಹಾಕಲು ಈ ದಾಳಿ ನಡೆಸಲಾಗಿದೆ. ಈ ವೇಳೆ ಗ್ಯಾಂಗ್ ಸದಸ್ಯರು ಶಸ್ತ್ರಸಜ್ಜಿತ ವಾಹನಗಳ ಚಲನವಲನವನ್ನು ತಡೆಯಲು ಕಾರುಗಳಿಗೆ ಬೆಂಕಿ ಹಚ್ಚಿದ್ದಾರೆ.

ಗುಂಡಿನ ಚಕಮಕಿಯ ಸದ್ದು ನಿರಂತರವಾಗಿ ಕೇಳಿಬಂದಿದೆ ಎಂದು ವರದಿಯಾಗಿದೆ.

**ಐತಿಹಾಸಿಕ ದಿನ ಎಂದ ಗವರ್ನರ್:** ರಿಯೊ ಗವರ್ನರ್ ಕ್ಲಾಡಿಯೊ ಕ್ಯಾಸ್ಟ್ರೊ ಅವರು ಸಾವಿನ ಸಂಖ್ಯೆಯನ್ನು ಖಚಿತಪಡಿಸಿದ್ದು, ಇದನ್ನು ಮಾದಕವಸ್ತು - ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಐತಿಹಾಸಿಕ ದಿನ ಎಂದು ಬಣ್ಣಿಸಿದ್ದಾರೆ.

ಕಾರ್ಯಾಚರಣೆಯ ವೇಳೆ 81 ಜನರನ್ನು ಬಂಧಿಸಲಾಗಿದ್ದು, 250 ಜನರ ಬಂಧನ ಮತ್ತು ಶೋಧಕ್ಕಾಗಿ ವಾರಂಟ್‌ಗಳನ್ನು ಜಾರಿಗೊಳಿಸುವ ಗುರಿ ಹೊಂದಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಗ್ಯಾಂಗ್ ಸದಸ್ಯರು ಪೊಲೀಸರ ಮೇಲೆ ಗ್ರೆನೇಡ್‌ಗಳನ್ನು ಅಳವಡಿಸಿದ ಡ್ರೋನ್‌ಗಳನ್ನು ಬಳಸಿ ದಾಳಿ ನಡೆಸುತ್ತಿರುವ ವಿಡಿಯೋವನ್ನು ಪೊಲೀಸರು ಬಿಡುಗಡೆ ಮಾಡಿದ್ದಾರೆ.

## ಎನ್‌ಡಿಎಗೆ 2/3ರಷ್ಟು ಬಹುಮತ ಬಂದರೆ ನ. 14ರಂದು ನೆಹರುಗೆ ಸಲ್ಲುವ ಗೌರವ: ರಾಜನಾಥ ಸಿಂಗ್



**ದರ್ಭಾಂಗ್:** 243 ಸದಸ್ಯಬಲದ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಮತ ಎಣಿಕೆ ದಿನವಾದ ನ. 14ರಂದು ಎನ್‌ಡಿಎಗೆ ಮೂರನೇ ಎರಡರಷ್ಟು ಬಹುಮತ ದೊರೆತಲ್ಲಿ ಅದುವೇ ಪಂಡಿತ್ ಜವಾಹರಲಾಲ್ ನೆಹರು ಅವರ ಜನ್ಮದಿನಕ್ಕೆ ಸಲ್ಲುವ ಸೂಕ್ತ ಗೌರವವಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬುಧವಾರ ಹೇಳಿದ್ದಾರೆ. ಪಟ್ನಾ ಜಿಲ್ಲೆಯ ಬರ್ಹನಲ್ಲಿ ನಡೆದ ಚುನಾವಣಾ ರ್‍ಯಾಲಿಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಬಿಹಾರಕ್ಕೆ ಗೂಂಡಾ ರಾಜ್‌ನ ಅಗತ್ಯವಿಲ್ಲ. ಆರ್‌ಜೆಡಿಯ 'ಜಂಗಲ್ ರಾಜ್'ನಿಂದ ಉಂಟಾಗಿರುವ ಹಾನಿಯನ್ನು ಸರಿಪಡಿಸುವಲ್ಲಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಯಶಸ್ವಿಯಾಗಿದ್ದಾರೆ.

ಆದರೆ ವಿರೋಧ ಪಕ್ಷಗಳು ಬಾಂಗ್ಲಾದೇಶದ ನುಸುಳುಕೋರರ ಮತಗಳನ್ನು ಪಡೆಯಲು ಹವಣಿಸುತ್ತಿವೆ ಎಂದು ಆರೋಪಿಸಿದ್ದಾರೆ.

ಸಾಂವಿಧಾನಿಕ ಸಂಸ್ಥೆಗಳನ್ನು ಅಪಖ್ಯಾತಿಗೊಳಿಸಿದರೆ ಪ್ರಜಾಪ್ರಭುತ್ವ ಹೇಗೆ ನಡೆಯುತ್ತದೆ ಎಂದ ಅವರು, ಚುನಾವಣಾ ಆಯೋಗದ ಮೇಲೆ ದಾಳಿ ಮಾಡಿದ್ದಕ್ಕಾಗಿ ಕಾಂಗ್ರೆಸ್ ಮತ್ತು ಆರ್‌ಜೆಡಿಯನ್ನು ಅವರು ಟೀಕಿಸಿದ್ದಾರೆ.

**ಸರ್ಕಾರಿ ನೌಕರಿ: ಅವಾಸ್ತವಿಕ ಭರವಸೆ:** ಇದಕ್ಕೂ ಮುನ್ನ ದರ್ಭಂಗಾ ಜಿಲ್ಲೆಯಲ್ಲಿ ನಡೆದ ಚುನಾವಣಾ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ರಾಜನಾಥ ಸಿಂಗ್, ಆರ್‌ಜೆಡಿ ವಿರುದ್ಧ ವಾಗ್ದಾಳಿ ನಡೆಸಿದರು. ರಾಜ್ಯದ ಪ್ರತಿಯೊಂದು ಮನೆಗೆ ಸರ್ಕಾರಿ ಉದ್ಯೋಗ ನೀಡುತ್ತೇವೆ ಎನ್ನುವುದು 'ಅವಾಸ್ತವಿಕ ಭರವಸೆ' ಎಂದಿದ್ದಾರೆ. ನಮ್ಮ ಪ್ರಣಾಳಿಕೆ ಗುರುವಾರ ಬಿಡುಗಡೆಯಾಗಲಿದೆ. ಅದರಲ್ಲಿ ನಮೂದಿಸಿರುವ ಪ್ರತಿಯೊಂದು ಪದವನ್ನೂ ಜಾರಿಗೆ ತರುತ್ತೇವೆ' ಎಂದು ಭರವಸೆ ನೀಡಿದ್ದಾರೆ.

## ವಿಡಿಯೋ ಕಾಲ್‌ನಲ್ಲಿರುವಾಗಲೇ ಆತ್ಮಹತ್ಯೆ ಮಾಡಿಕೊಂಡ ಪತಿ

**ಮುಜಫರ್‌ನಗರ:** ಸೌದಿ ಅರೇಬಿಯಾದಲ್ಲಿ ವಾಸವಿದ್ದ ಉತ್ತರ ಪ್ರದೇಶ ಮೂಲದ 24 ವರ್ಷದ ವ್ಯಕ್ತಿಯೊಬ್ಬರು ಭಾರತದಲ್ಲಿ ವಾಸವಿದ್ದ ಹೆಂಡತಿಯೊಂದಿಗೆ ವಿಡಿಯೋ ಕಾಲ್‌ನಲ್ಲಿರುವಾಗಲೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬುಧವಾರ ಪೊಲೀಸರು ತಿಳಿಸಿದ್ದಾರೆ. ಅ.26 ರಂದು ಹೆಂಡತಿಯೊಂದಿಗೆ ವಿಡಿಯೋ ಕಾಲ್‌ನಲ್ಲಿರುವಾಗ ಜಗಳವಾಗಿದ್ದು, ತಕ್ಷಣವೇ ರಿಯಾದ್‌ನಲ್ಲಿರುವ ಮನೆಯ ಫ್ಯಾನ್‌ಗೆ ನೇಣು ಬಿಗಿದುಕೊಂಡು ಅನ್ಸಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಿರುವ ಮೊಹಮ್ಮದ್ ಅನ್ಸಾರಿಗೆ, ಏ.7ರಂದು ಸಾನಿಯಾ(21) ಜತೆ ಮದುವೆಯಾಗಿತ್ತು. ಕೆಲಸದ ನಿಮಿತ್ತ ಎರಡುವರೆ ತಿಂಗಳ ಹಿಂದೆಯಷ್ಟೇ ಅನ್ಸಾರಿ ಅವರು ರಿಯಾದ್‌ಗೆ ತೆರಳಿದ್ದರು ಎಂದು ಕುಟುಂಬದವರು ತಿಳಿಸಿದ್ದಾರೆ. ಘಟನೆಯ ನಂತರ, ಸೌದಿ ಅರೇಬಿಯಾದಲ್ಲಿದ್ದ ಸಂಬಂಧಿಕರಿಗೆ ಪತ್ನಿ ಸಾನಿಯಾ ವಿಷಯ ತಿಳಿಸಿದ್ದಾರೆ. ಅವರು ಅಲ್ಲಿಗೆ ತಲುಪುವ ವೇಳೆಗೆ ಅನ್ಸಾರಿ ಮೃತಪಟ್ಟಿದ್ದಾರೆ ಎಂದು ಹೇಳಿದ್ದಾರೆ. ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಗೆ ಮಾಹಿತಿ ನೀಡಲಾಗಿದ್ದು, ಮೃತದೇಹವನ್ನು ಅಂತ್ಯಸಂಸ್ಕಾರ ಮಾಡಲು ಮುಜಫರ್‌ನಗರಕ್ಕೆ ತರಲು ಪ್ರಯತ್ನ ಮಾಡಲಾಗುತ್ತಿದೆ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

## ಲೋಕಲ್ ಗೂಂಡಾಗೆ ಬಿಹಾರದ ಮತದಾರ ಡ್ಯಾನ್ಸ್ ಮಾಡಿಸಲಿದ್ದಾನೆ; ಬಿಜೆಪಿ ತಿರುಗೇಟು



**ಪಾಟ್ನಾ:** ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಮಹಾಘಟ ಬಂಧನ್ ಮೈತ್ರಿಕೂಟದ ಸಿಎಂ ಅಭ್ಯರ್ಥಿ ತೇಜಸ್ವಿ ಯಾದವ್ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದ ರಾಹುಲ್ ಗಾಂಧಿ, ಪ್ರಧಾನಮಂತ್ರಿ ನರೇಂದ್ರ ಮೋದಿ ವಿರುದ್ಧ ಕೀಳುಮಟ್ಟದ ಹೇಳಿಕೆ ನೀಡಿ ವಿವಾದ ಸೃಷ್ಟಿಸಿದ್ದಾರೆ. ಪ್ರಧಾನಿ ಮೋದಿ ಮತಗಳಿಗಾಗಿ ವೇದಿಕೆ ಮೇಲೆ ಡ್ಯಾನ್ಸ್ ಮಾಡುತ್ತಾರೆ ಎಂದು ಹೇಳಿರುವ ರಾಹುಲ್ ಗಾಂಧಿ, ಬಿಜೆಪಿಯ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ರಾಹುಲ್ ಗಾಂಧಿ ಅವರ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿರುವ ಬಿಜೆಪಿ, ಕಾಂಗ್ರೆಸ್ ನಾಯಕ ಬಿಹಾರ ಮತದಾರರನ್ನು ಅವಮಾನಿಸಿದ್ದಾರೆ ಎಂದು ತೀವ್ರ ಆಕ್ರೋಶ ಹೊರಹಾಕಿದೆ. ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಬಿಜೆಪಿ ನಾಯಕ ಪ್ರದೀಪ್ ಭಂಡಾರಿ, ರಾಹುಲ್ ಗಾಂಧಿ ಸ್ಥಳೀಯ ಗೂಂಡಾ ರೀತಿಯಲ್ಲಿ ಮಾತನಾಡುತ್ತಾರೆ. ಪ್ರಧಾನಿ ಮೋದಿ ಅವರಿಗೆ ಮತ ಹಾಕಿದ ಭಾರತದ ಮತ್ತು ಬಿಹಾರದ ಮತದಾರರನ್ನು ರಾಹುಲ್ ಗಾಂಧಿ ಬಹಿರಂಗವಾಗಿ ಅವಮಾನಿಸಿದ್ದಾರೆ. ಕಾಂಗ್ರೆಸ್ ನಾಯಕ ಪ್ರಜಾಪ್ರಭುತ್ವವನ್ನು ಅಣಕಿಸಿದ್ದಾರೆ ಎಂದು ಕಿಡಿಕಾರಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಖಂಡಿಸಿದ ಬಿಜೆಪಿಯ ಅಮಿತ್ ಮಾಳವೀಯ, ಗಾಂಧಿಯವರು ಜಾನಪದ ನಂಬಿಕೆಯ ಮಹಾನ್ ಹಬ್ಬವಾದ ಛಠಿ ಮೈಯಾವನ್ನು ಅವಮಾನಿಸುವ ಮೂಲಕ ತಮ್ಮ ಬಿಹಾರ ಚುನಾವಣಾ ಪ್ರಚಾರವನ್ನು ಪ್ರಾರಂಭಿಸಿದ್ದಾರೆ ಎಂದು ಆರೋಪಿಸಿದರು. ಇದೇ ವಿಚಾರವಾಗಿ ಮಾತನಾಡಿರುವ ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ, ರಾಹುಲ್ ಗಾಂಧಿ ಅವರ ದ್ವೇಷಪೂರಿತ ಮಾತುಗಳು ಗೌರವಾನ್ವಿತ ಪ್ರಧಾನಿ ಮೋದಿ ಅವರ ವಿರುದ್ಧ ಮಾತ್ರವಲ್ಲ, ಬಿಹಾರ ಮತ್ತು ಬಿಹಾರದ ಜಾನಪದ ನಂಬಿಕೆಗಳ ಬಗ್ಗೆ ಅವರ ಹೃದಯದಲ್ಲಿರುವ ಆಳವಾದ ಕಹಿಯನ್ನು ಪ್ರತಿಬಿಂಬಿಸುತ್ತವೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಅಲ್ಲದೇ ವಿಪಕ್ಷ ಸಿಎಂ ಅಭ್ಯರ್ಥಿ ತೇಜಸ್ವಿ ಯಾದವ್ ಅವರಿಗೆ ಕೊಂಚವಾದರೂ ಬಿಹಾರದ ಜಾನಪದ ನಂಬಿಕೆಗಳ ಬಗ್ಗೆ ಗೌರವವಿದ್ದರೆ, ರಾಹುಲ್ ಗಾಂಧಿ ಅವರ ಹೇಳಿಕೆಯನ್ನು ಮುಲಾಜಿಲ್ಲದೇ ಖಂಡಿಸಬೇಕು ಎಂದು ಅಮಿತ್ ಮಾಳವೀಯ ಒತ್ತಾಯಿಸಿದ್ದಾರೆ. ತೇಜಸ್ವಿ ಯಾದವ್ ಈ ಕುರಿತು ಇದುವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

## ಮಿನಿ ನ್ಯೂಸ್

### ಭಾರತ ಚೀನಾ ಸೇನೆಗಳ ನಡುವೆ ಮಾತುಕತೆ: ಶಾಂತಿ ಕಾಪಾಡಲು ಒಪ್ಪಿಗೆ

**ನವದೆಹಲಿ:** ಪೂರ್ವ ಲಡಾಖ್‌ನ ವಾಸ್ತವಿಕ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ ಶಾಂತಿ ಮತ್ತು ಸುರಕ್ಷತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಭಾರತ ಮತ್ತು ಚೀನಾ ಸೇನೆಗಳ ನಡುವೆ ಮಾತುಕತೆ ನಡೆದಿದೆ ಎಂದು ಚೀನಾ ರಕ್ಷಣಾ ಸಚಿವಾಲಯವು ಬುಧವಾರ ತಿಳಿಸಿದೆ. ಅ. 25ರಂದು ಉಭಯ ದೇಶಗಳ ನಡುವೆ ಮೊಲೆ-ಚುಶುಲ್ ಗಡಿಯಲ್ಲಿ ಕಾರ್ಪ್ಸ್ ಕಮಾಂಡರ್ ಮಟ್ಟದ ಮಾತುಕತೆ ನಡೆದಿದೆ. ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಹಾಗೂ ಭಾರತದ ಪ್ರಧಾನಿ ಮೋದಿ ಅವರ ಸೂಚನೆಯಂತೆ, ಉಭಯ ದೇಶಗಳ ನಡುವಿನ ಗಡಿಯ ಪಶ್ಚಿಮ ವಲಯದಲ್ಲಿ ಎರಡೂ ದೇಶಗಳ ಸೇನೆಗಳು ಸಕ್ರಿಯವಾಗಿರಬೇಕು ಹಾಗೂ ಸಂವಹನ ನಡೆಸುತ್ತಿರಬೇಕು. ಈ ಮೂಲಕ ಗಡಿಯಲ್ಲಿ ಶಾಂತಿ ಸ್ಥಾಪಿಸಬೇಕು ಎಂದು ನಿರ್ಧರಿಸಲಾಗಿದೆ ಎಂದು ಮಾಹಿತಿ ನೀಡಿದೆ. ಈ ಸಭೆಯ ಕುರಿತು ಭಾರತವು ಇದುವರೆಗೂ ಯಾವುದೇ ಅಧಿಕೃತ ಮಾಹಿತಿಯನ್ನು ಬಿಡುಗಡೆಗೊಳಿಸಿಲ್ಲ.

### ದಕ್ಷಿಣ ಕೊರಿಯಾಕ್ಕೆ ಟ್ರಂಪ್ ಭೇಟಿ; ಕ್ಷಿಪಣಿ ಹಾರಿಸಿದ ಉತ್ತರ ಕೊರಿಯಾ

**ಸೋಲ್:** ದಕ್ಷಿಣ ಕೊರಿಯಾಕ್ಕೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭೇಟಿ ನೀಡುತ್ತಿದ್ದಂತೆಯೇ ಉತ್ತರ ಕೊರಿಯಾ ಕ್ಷಿಪಣಿ ಉಡಾಯಿಸಿದೆ ಎಂದು ವರದಿಯಾಗಿದೆ. ಸಮುದ್ರದಿಂದ ನೆಲಕ್ಕೆ ಚಿಮ್ಮುವ ಕ್ರೂಸ್ ಕ್ಷಿಪಣಿಗಳ ಪರೀಕ್ಷಾರ್ಥ ಪ್ರಯೋಗವನ್ನು ಉತ್ತರ ಕೊರಿಯಾ ನಡೆಸಿದೆ. ಗುರಿ ನಿರ್ದೇಶಿತ ಕ್ಷಿಪಣಿಗಳು ಪಶ್ಚಿಮ ಸಾಗರದಲ್ಲಿ ಗುರಿ ಮುಟ್ಟಿವೆ ಎಂದು ಕೊರಿಯನ್ ಸೆಂಟ್ರಲ್ ನ್ಯೂಸ್ ಏಜೆನ್ಸಿ ತಿಳಿಸಿದೆ. ಡೊನಾಲ್ಡ್ ಟ್ರಂಪ್, ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜೆ ಮಯುಂಗ್ ನಡುವಣ ಭೇಟಿಗೂ ಕೆಲವೇ ಗಂಟೆಗಳಿಗೂ ಮುನ್ನ ಉತ್ತರ ಕೊರಿಯಾದಿಂದ ಕ್ಷಿಪಣಿ ಪರೀಕ್ಷೆ ನಡೆದಿದೆ.

ಉತ್ತರ ಕೊರಿಯಾದ ವಿರುದ್ಧ ಅಮೆರಿಕ ಹಾಗೂ ದಕ್ಷಿಣ ಕೊರಿಯಾ ಸಂಯೋಜಿತ ರಕ್ಷಣಾ ಸಿದ್ಧತೆ ನಡೆಸುವುದಾಗಿಯೂ ವರದಿ ಹೇಳಿದೆ. ಆದರೂ ಉತ್ತರ ಕೊರಿಯಾದ ಕ್ಷಿಪಣಿ ಪರೀಕ್ಷೆಗಳಿಗೆ ಹೆಚ್ಚಿನ ಮಹತ್ವ ನೀಡಲು ಟ್ರಂಪ್ ನಿರಾಕರಿಸಿದರು. ಅವರು ದಶಕಗಳಿಂದಲೂ ಕ್ಷಿಪಣಿ ಪರೀಕ್ಷೆ ನಡೆಸುತ್ತಿದ್ದಾರೆ. ಸರಿಯಲ್ಲವೇ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ. ಉತ್ತರ ಕೊರಿಯಾದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಅವರನ್ನು ಭೇಟಿಯಾಗಲು ಟ್ರಂಪ್ ಉತ್ಸುಕತೆ ವ್ಯಕ್ತಪಡಿಸಿದ್ದಾರೆ. ನಮ್ಮಿಬ್ಬರ ಮಧ್ಯೆ ಉತ್ತಮ ತಿಳಿವಳಿಕೆ ಇತ್ತು ಎಂದೂ ಹೇಳಿದ್ದಾರೆ.

### ದೆಹಲಿಯಲ್ಲಿ ವಾಯು ಮಾಲಿನ್ಯ ತೀವ್ರ ಏರ್ ಪ್ಯೂರಿಫೈರ್‌ಗೆ ಹೆಚ್ಚಿದ ಬೇಡಿಕೆ

**ನವದೆಹಲಿ:** ದೀಪಾವಳಿ ಹಬ್ಬದ ಬಳಿಕ ದೆಹಲಿ-ಎನ್‌ಸಿಆರ್‌ನಲ್ಲಿ ವಾಯುಮಾಲಿನ್ಯ ಹೆಚ್ಚಳವಾಗಿದ್ದು, ಏರ್ ಪ್ಯೂರಿಫೈರ್ ಖರೀದಿಸುವವರ ಸಂಖ್ಯೆ ದಿಢೀರ್ ಏರಿಕೆಯಾಗಿದೆ. ದೆಹಲಿಯಲ್ಲಿ ಬುಧವಾರ ಗಾಳಿಯ ಗುಣಮಟ್ಟ ತುಸು ಸುಧಾರಿಸಿದರೂ ಕಳಪೆ ಮಟ್ಟದಲ್ಲೇ ಮುಂದುವರಿದಿದ್ದು ಎಕ್ಯೂಐ ಸೂಚ್ಯಂಕ 273ಕ್ಕೆ ತಲುಪಿದೆ ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಹೇಳಿದೆ. ಸೋಮವಾರ ನಗರದಲ್ಲಿ ಎಕ್ಯೂಐ ಸೂಚ್ಯಂಕ 301ಕ್ಕೆ ಹಾಗೂ ಮಂಗಳವಾರ 294 ಕ್ಕೆ ತಲುಪುವ ಮೂಲಕ ಗಾಳಿಯ ಗುಣಮಟ್ಟ ಅತಿ ಕಳಪೆ ಮಟ್ಟಕ್ಕೆ ಕುಸಿದಿತ್ತು.

ಯುರೇಕಾ ಫೋರ್ಬ್ಸ್‌ನ ಅಧಿಕಾರಿಯೊಬ್ಬರು ಪಿಟಿಐ ಜತೆ ಮಾತನಾಡಿ, ದೀಪಾವಳಿ ಇರುವ ಕಾರಣಕ್ಕೆ ಅಕ್ಟೋಬರ್‌ನಲ್ಲಿ ಏರ್ ಪ್ಯೂರಿಫೈರ್‌ಗೆ ಬೇಡಿಕೆ ಹೆಚ್ಚಳವಾಗಿದೆ. ನಗರದಲ್ಲಿನ ವಾಯುಮಾಲಿನ್ಯ ಹೆಚ್ಚಳ ಮತ್ತು ಜನರಲ್ಲಿ ಜಾಗೃತಿ ಮೂಡಿರುವುದರಿಂದ ಏರ್ ಪ್ಯೂರಿಫೈರ್ ಬಳಕೆಯತ್ತ ಜನ ಒಲವು ತೋರುತ್ತಿದ್ದಾರೆ ಎಂದರು. ಕೆನ್ಸ್ ಆರ್‌ಒನ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಮಹೇಶ್ ಗುಪ್ತಾ ಮಾತನಾಡಿ, ದೆಹಲಿ ಉತ್ತರ ಭಾಗದಲ್ಲಿ ಮಾಲಿನ್ಯ ಹೆಚ್ಚಾಗಿದೆ. ಜನರು ತಮ್ಮ ಆರೋಗ್ಯವನ್ನು ರಕ್ಷಿಸಿಕೊಳ್ಳಲು ಏರ್ ಪ್ಯೂರಿಫೈರ್ ಖರೀದಿಯತ್ತ ಮುಖ ಮಾಡುತ್ತಿದ್ದಾರೆ. ಹಬ್ಬದ ಸಂದರ್ಭದಲ್ಲಿ ಮಾರಾಟ ಶೇ 30-40ರಷ್ಟು ಏರಿಕೆಯಾಗಿದೆ ಎಂದರು.

### ಆಂಧ್ರದಲ್ಲಿ ಮೊಂಥಾ; ಇಬ್ಬರ ಸಾವು, ಮುನ್ನೆಚ್ಚರಿಕೆ ವಹಿಸಿ- ನಾಯ್ಡು ಸೂಚನೆ

**ಅಮರಾವತಿ:** ಆಂಧ್ರಪ್ರದೇಶದ ಕರಾವಳಿಗೆ ಅಪ್ಪಳಿಸಿದ ಮೊಂಥಾ ಚಂಡಮಾರುತದಿಂದಾಗಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಬುಧವಾರ ತಿಳಿಸಿದ್ದಾರೆ. ಚಂಡಮಾರುತದಿಂದ ಹಾನಿಗೊಳಗಾದ ಜನರಿಗೆ ಪರಿಹಾರ ಒದಗಿಸಲು, ಇನ್ನೂ ಎರಡು ದಿನಗಳ ಕಾಲ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿ. ಈ ನಿಟ್ಟಿನಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ನಾಯ್ಡು ಸೂಚನೆ ನೀಡಿದ್ದಾರೆ. ಮುನ್ನೆಚ್ಚರಿಕೆ ಕ್ರಮಗಳಿಂದಾಗಿ ಚಂಡಮಾರುತದಿಂದ ಆಗಬಹುದಾದ ಹಾನಿಯನ್ನು ಕಡಿಮೆ ಮಾಡಲಾಗಿದೆ.

ಮೊಂಥಾ ಚಂಡಮಾರುತ ತೀವ್ರತೆ ಕಡಿಮೆ ಆಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ಹೀಗಾಗಿ ಸಾಧ್ಯವಾದಷ್ಟು ಬೇಗ ಮತ್ತೆ ಪರಿಸ್ಥಿತಿಯನ್ನು ಸಹಜ ಸ್ಥಿತಿಗೆ ತರುವಂತೆ ಅಧಿಕಾರಿಗಳಿಗೆ ನಾಯ್ಡು ಹೇಳಿದ್ದಾರೆ. ಚಂಡಮಾರುತದಿಂದ ಉಂಟಾದ ಹಾನಿಯನ್ನು ಅಂದಾಜು ಮಾಡುವಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಈ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಒದಗಿಸಬೇಕು. ಅದೇ ರೀತಿ, ಸಂತ್ರಸ್ತರಿಗೆ ಆಹಾರ ಮತ್ತು ಇತರ ಅಗತ್ಯ ವಸ್ತುಗಳನ್ನು ವಿತರಿಸಲು ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ದಿಲ್ಲಿಯಲ್ಲಿ ಸ್ವತಂತ್ರವಾಗಿ ಬದುಕುತ್ತಿದ್ದೇನೆ, ಆದರೆ.. ಮನದಾಸೆ ಹೊರಹಾಕಿದ ಬಾಂಗ್ಲಾದೇಶ ಮಾಜಿ ಪ್ರಧಾನಿ ಶೇಖ್ ಹಸೀನಾ

# ಭಾರತದಲ್ಲಿ ಮುಕ್ತವಾಗಿ ಬದುಕುತ್ತಿದ್ದೇನೆ: ಮಾಜಿ ಪ್ರಧಾನಿ ಶೇಖ್ ಹಸೀನಾ

**ಹೊಸದಿಲ್ಲಿ:** 2024ರಲ್ಲಿ ಬಾಂಗ್ಲಾದೇಶದಿಂದ ತಪ್ಪಿಸಿಕೊಂಡು ಬಂದು ಭಾರತದಲ್ಲಿ ಆಶ್ರಯ ಪಡೆದಿರುವ ಪದಚ್ಯುತ ಪ್ರಧಾನಿ ಶೇಖ್ ಹಸೀನಾ, ಭಾರತದಲ್ಲಿ ಯಾವುದೇ ತೊಂದರೆಯಿಲ್ಲದೇ ಜೀವನ ನಡೆಸುತ್ತಿರುವುದಾಗಿ ಹೇಳಿದ್ದಾರೆ. ರಾಯಿಟರ್ಸ್‌ಗೆ ನೀಡಿದ ಸಂದರ್ಶನದಲ್ಲಿ, ದಿಲ್ಲಿಯಲ್ಲಿ ನಾನು ಸ್ವತಂತ್ರವಾಗಿ ಬದುಕುತ್ತಿದ್ದೇನೆ, ಆದರೆ ಬಾಂಗ್ಲಾದೇಶಕ್ಕೆ ಮರಳಬೇಕು ಎಂಬುದು ನನ್ನ ಮನದಾಸೆ ಎಂದು ಶೇಖ್ ಹಸೀನಾ ಹೇಳಿದ್ದಾರೆ.

ನಾನು ಭಾರತದ ರಾಜಧಾನಿ ಹೊಸದಿಲ್ಲಿಯಲ್ಲಿ ಸ್ವತಂತ್ರವಾಗಿ ಬದುಕುತ್ತಿದ್ದೇನೆ. ಇಲ್ಲಿ ನನಗೆ ಯಾವ ತೊಂದರೆಗಳೂ ಇಲ್ಲ. ಆದರೆ ನನ್ನ ಮಾತೃಭೂಮಿ ಬಾಂಗ್ಲಾದೇಶಕ್ಕೆ ಮರಳಬೇಕು, ಅಲ್ಲಿನ ಜನರ ನೋವಿಗೆ ಧ್ವನಿಯಾಗಬೇಕು, ಬಾಂಗ್ಲಾದೇಶವನ್ನು ದುಷ್ಟ ಶಕ್ತಿಗಳ ಕಪಿಮುಷ್ಠಿಯಿಂದ ರಕ್ಷಿಸಬೇಕು ಎಂಬುದು ನನ್ನ ಮನದಾಸೆಯಾಗಿದೆ ಎಂದು ಶೇಖ್ ಹಸೀನಾ ಭಾವನಾತ್ಮಕವಾಗಿ ಹೇಳಿದ್ದಾರೆ. ಇದೇ ವೇಳೆ ಬಾಂಗ್ಲಾದೇಶದ ಅವಾಮಿ ಲೀಗ್ ಪಕ್ಷವನ್ನು ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಿದ ತೀರ್ಮಾನವನ್ನು ಖಂಡಿಸಿದ ಶೇಖ್ ಹಸೀನಾ, ಪಕ್ಷದ ಲಕ್ಷಾಂತರ ಬೆಂಬಲಿಗರು ಮುಂದಿನ ವರ್ಷ ನಡೆಯಲಿರುವ ರಾಷ್ಟ್ರೀಯ ಚುನಾವಣೆಯನ್ನು ಬಹಿಷ್ಕರಿಸಲಿದ್ದಾರೆ ಎಂದು ಘೋಷಿಸಿದ್ದಾರೆ.



ತಮ್ಮ ಪಕ್ಷವನ್ನು ಹೊರಗಿಟ್ಟು ನಡೆಯುವ ಚುನಾವಣೆಗಳ ಬಳಿಕ ರಚನೆಯಾಗುವ ಯಾವುದೇ ಸರ್ಕಾರದ ಅಡಿಯಲ್ಲಿ, ತಾವು ಬಾಂಗ್ಲಾದೇಶಕ್ಕೆ ಹಿಂತಿರುಗುವುದಿಲ್ಲ ಎಂದು ಶೇಖ್ ಹಸೀನಾ ಸ್ಪಷ್ಟಪಡಿಸಿದ್ದಾರೆ. ಅವಾಮಿ ಲೀಗ್‌ಗೆ ಚುನಾವಣೆ ಸ್ಪರ್ಧೆ ನಿಷೇಧಿಸಿರುವುದು, ಬಾಂಗ್ಲಾದೇಶಕ್ಕೆ ಮಾಡುತ್ತಿರುವ ಅನ್ಯಾಯ ಎಂದು ಪದಚ್ಯುತ ಪ್ರಧಾನಿ ತೀವ್ರ ಅಸಮಾಧಾನ ಹೊರಹಾಕಿದ್ದಾರೆ. ಲಕ್ಷಾಂತರ ಆವಾಮಿ ಲೀಗ್ ಕಾರ್ಯಕರ್ತರು ಮುಂದಿನ ವರ್ಷ ನಡೆಯಲಿರುವ ಬಾಂಗ್ಲಾದೇಶದ ರಾಷ್ಟ್ರೀಯ ಚುನಾವಣೆಯನ್ನು ಬಹಿಷ್ಕರಿಸಲಿದ್ದಾರೆ. ಬಾಂಗ್ಲಾದೇಶಿಯರ ಬದುಕನ್ನು ದುಸ್ತರ ಮಾಡಿರುವ ಮಧ್ಯಂತರ ಸರ್ಕಾರ, ಜನರ ಧ್ವನಿಯಾಗಿರುವ ಆವಾಮಿ ಲೀಗ್ ಪಕ್ಷಕ್ಕೆ ಅದೆಷ್ಟು ಹೆದರುತ್ತದೆ ಎಂಬುದಕ್ಕೆ ಪಕ್ಷದ ಮೇಲೆ ಹೇರಿರುವ ಚುನಾವಣಾ ನಿಷೇಧವೇ ಸಾಕ್ಷಿ ಎಂದು ಶೇಖ್ ಹಸೀನಾ ಗುಡುಗಿದ್ದಾರೆ. ಬಾಂಗ್ಲಾದೇಶವು 126 ಮಿಲಿಯನ್‌ಗಿಂತಲೂ ಹೆಚ್ಚು ನೋಂದಾಯಿತ ಮತದಾರರನ್ನು ಹೊಂದಿದೆ. ಅವಾಮಿ ಲೀಗ್, ಬಾಂಗ್ಲಾದೇಶ ರಾಷ್ಟ್ರೀಯತಾವಾದಿ ಪಕ್ಷವು ದೇಶದ ರಾಜಕೀಯದಲ್ಲಿ ಬಹಳ ಹಿಂದಿನಿಂದಲೂ ಪ್ರಾಬಲ್ಯ ಸಾಧಿಸಿವೆ. ಮುಂಬರುವ ರಾಷ್ಟ್ರೀಯ ಚುನಾವಣೆಯಲ್ಲಿ ಬಿಎನ್‌ಪಿ ಗೆಲ್ಲುವ ನಿರೀಕ್ಷೆಯಿದೆ. ಮೇ ತಿಂಗಳಲ್ಲಿ ಬಾಂಗ್ಲಾದೇಶದ ಚುನಾವಣಾ ಆಯೋಗವು ಅವಾಮಿ ಲೀಗ್‌ನ ನೋಂದಣಿಯನ್ನು ಸ್ಥಗಿತಗೊಳಿಸಿದೆ. ಇದಕ್ಕೂ ಮೊದಲು ಮೊಹಮ್ಮದ್ ಯೂನಸ್ ನೇತೃತ್ವದ ಸರ್ಕಾರವು, ರಾಷ್ಟ್ರೀಯ ಭದ್ರತಾ ಬೆದರಿಕೆಗಳು ಮತ್ತು ಹಿರಿಯ ಅವಾಮಿ ಲೀಗ್ ನಾಯಕರ ಮೇಲಿನ ಯುದ್ಧ ಅಪರಾಧಗಳ ತನಿಖೆಗಳನ್ನು ಉಲ್ಲೇಖಿಸಿ, ಪಕ್ಷದ ಎಲ್ಲಾ ಸಾರ್ವಜನಿಕ ಚಟುವಟಿಕೆಗಳನ್ನು ನಿಷೇಧಿಸಿತ್ತು. ಮೊಹಮ್ಮದ್ ಯೂನಸ್ ನೇತೃತ್ವದ ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು, ಆವಾಮಿ ಲೀಗ್ ಪಕ್ಷದ ವಿರುದ್ಧ ಯುದ್ಧವನ್ನೇ ಸಾರಿದ್ದು, ಈ ಹಿಂದೆಯೇ ಶೇಖ್ ಹಸೀನಾ ಹಸ್ತಾಂತರ ಕೋರಿ ಭಾರತಕ್ಕೆ ಮನವಿ ಪತ್ರ ಬರೆದಿರುವುದನ್ನು ಇಲ್ಲಿ ಸ್ಮರಿಸಬಹುದು.

> ಈ ಹಿನ್ನೆಲೆಯಲ್ಲಿ ಆವಾಮಿ ಲಿಗ್ ಕಾರ್ಯಕರ್ತರಿಗೆ ಚುನಾವಣೆಯನ್ನು ಬಹಿಷ್ಕರಿಸುವಂತೆ ಕರೆ ನೀಡಿರುವ ಶೇಖ್ ಹಸೀನಾ, ಚುನಾವಣೆಯಲ್ಲಿ ಯಾವುದೇ ಅನ್ಯ ರಾಜಕೀಯ ಪಕ್ಷಗಳನ್ನು ಬೆಂಬಲಿಸದಂತೆ ಕಾರ್ಯಕರ್ತರಲ್ಲಿ ಮನವಿ ಮಾಡಿದ್ದಾರೆ. ಅಲ್ಲದೇ ಪಕ್ಷಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಕೊನೆ ಕ್ಷಣದಲ್ಲಿ ಅವಕಾಶ ನೀಡಲಾಗುತ್ತದೆ.
>
> – ಶೇಖ್ ಹಸೀನಾ, ಬಾಂಗ್ಲಾದೇಶದ ಮಾಜಿ ಪ್ರಧಾನಿ

**ಸದ್ಯದ ಪರಿಸ್ಥಿತಿಗೆ ಕಳವಳ ವ್ಯಕ್ತಪಡಿಸಿರುವ ಶೇಖ್ ಹಸೀನಾ**

ಆಶ್ರಯ ಬೇಡಿ ಬರುವ ಎಲ್ಲರನ್ನೂ ಭಾರತ ಅಪ್ಪಿಕೊಳ್ಳುತ್ತದೆ ಎನ್ನುವುದಕ್ಕೆ, 2024ರಿಂದ ಭಾರತದಲ್ಲಿ ಆಶ್ರಯ ಪಡೆದಿರುವ ಬಾಂಗ್ಲಾದೇಶ ಪದಚ್ಯುತ ಪ್ರಧಾನಿ ಶೇಕ್ ಹಸೀನಾ ಅವರ ಹೇಳಿಕೆಯೇ ಸಾಕ್ಷಿ. ರಾಯಿಟರ್ಸ್ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ, ಶೇಖ್ ಹಸೀನಾ ಅವರು, ದಿಲ್ಲಿಯಲ್ಲಿ ಮುಕ್ತವಾಗಿ ಬದುಕು ಸಾಗಿಸುತ್ತಿದ್ದು, ಆದರೂ ಬಾಂಗ್ಲಾದೇಶಕ್ಕೆ ಮರಳಬೇಕು ಎಂಬ ಇಚ್ಛೆ ಇದೆ ಎಂದು ಹೇಳಿದ್ದಾರೆ. ಬಾಂಗ್ಲಾದೇಶದ ಸದ್ಯದ ಪರಿಸ್ಥಿತಿಗೆ ಕಳವಳ ವ್ಯಕ್ತಪಡಿಸಿರುವ ಶೇಖ್ ಹಸೀನಾ, ಮೊಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

